# ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

## ಕಲಾಸಿಪಾಳ್ಯ, ಬೆಂಗಳೂರು–02

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 100** ಮಾದರಿ ಪ್ರಶ್ನೆ ಪತ್ರಿಕೆ 1 **ಅವಧಿ : 3ಗಂ.15ನಿಮಿಷಗಳು**

**ಉತ್ತರ ಸಹಿತ**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.** **6*1=6**

1. **ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು**

ಎ) ಉದ್ಧರಣ ಬಿ) ಭಾವಸೂಚಕ ಸಿ) ವಾಕ್ಯವೇಷ್ಠನ ಡಿ) ಆವರಣ

**ಉತ್ತರ: ಸಿ) ವಾಕ್ಯವೇಷ್ಠನ**

**2. 'ದೇವರು ನಮ್ಮ ತಪ್ಪುಗಳನ್ನು ಕ್ಷಮಿಸಿಯಾನು' ಈ ವಾಕ್ಯದಲ್ಲಿಯ ಕ್ರಿಯಾರೂಪವು**

ಎ) ನಿಷೇಧಾರ್ಥಕ ಬಿ)ಆತ್ಮಾರ್ಥಕ ಸಿ) ವಿಧ್ಯರ್ಥಕ ಡಿ) ಸಂಭಾವನಾರ್ಥಕ

**ಉತ್ತರ : ಡಿ) ಸಂಭಾವನಾರ್ಥಕ**

**3. ಉರ್ವಿಯೊಳ್ – ಪದದಲ್ಲಿರುವ ವಿಭಕ್ತಿ**

ಎ) ಪ್ರಥಮ ಬಿ) ದ್ವಿತೀಯ ಸಿ) ತೃತೀಯ ಡಿ) ಸಪ್ತಮಿ

**ಉತ್ತರ : ಡಿ) ಸಪ್ತಮಿ**

**4. ಕೆಳಗಿನ ಪದಗಳಲ್ಲಿನ ರೂಢನಾಮ ಪದ**

ಎ) ವ್ಯಾಪಾರಿ ಬಿ) ಧರ್ಮರಾಯ ಸಿ) ನದಿ ಡಿ) ಕೆಟ್ಟ

**ಉತ್ತರ : ಸಿ) ನದಿ**

**5. ಙ್, ಞ್, ಣ್, ನ್, ಮ್– ಈ ಅಕ್ಷರಗಳು ವರ್ಣಮಾಲೆಯ ಈ ಗುಂಪಿಗೆ ಸೇರಿವೆ**

ಎ) ಅಲ್ಪಪ್ರಾಣಗಳು ಬಿ) ಮಹಾಪ್ರಾಣಗಳು ಸಿ) ಅನುನಾಸಿಕಗಳು ಡಿ) ಸ್ವರಗಳು

**ಉತ್ತರ : ಸಿ) ಅನುನಾಸಿಕಗಳು**

**6. ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು ಹೀಗೆನ್ನುವರು.**

ಎ) ಕ್ರಿಯಾರ್ಥಕ ಬಿ)ಅನುಕರಣಾವ್ಯಯ ಸಿ)ಅವಧಾರಣಾರ್ಥಕ ಡಿ) ಸಾಮಾನ್ಯಾರ್ಥಕ

**ಉತ್ತರ : ಎ) ಕ್ರಿಯಾರ್ಥಕ**

**II. ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಪದವನ್ನು ಬರೆಯಿರಿ.** **4*1=4**

7. ಯಾರು : ಪ್ರಶ್ನಾರ್ಥಕ ಸರ್ವನಾಮ :: ತಾವು : ____________ **ಉತ್ತರ : ಆತ್ಮಾರ್ಥಕ ಸರ್ವನಾಮ**

8. ಸಾಕ್ಷಿಮಾಡಿ : ಕ್ರಿಯಾಸಮಾಸ : : ಅಂತಕಾತ್ಮಜ :__________ **ಉತ್ತರ : ಬಹುವ್ರೀಹಿ ಸಮಾಸ**

9. ನೆನಪು : ಕೃದಂತ ಭಾವನಾಮ : : ಮಾಡಲಿಕ್ಕೆ :__________ **ಉತ್ತರ: ಕೃದಂತಾವ್ಯಯ**

10. ವಿದ್ಯಾಧರ : ಬಿಜ್ಜೋದರ : : ವೈಶಾಖ : __________ **ಉತ್ತರ : ಬೇಸಗೆ**

**III. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7*1=7**

**11. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು?**

**ಉತ್ತರ:** ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ನಯಸೇನ

**12. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?**

**ಉತ್ತರ:** ಹಸಿದು ಮಲಗಿದ್ದ ಹುಲಿಯು ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು.

**13. ಯುದ್ಧದ ಬಗೆಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು?**

**ಉತ್ತರ:** "ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ" ಎಂದು ಗೊಣಗಿಕೊಂಡು ಬಾಗಿಲು ತೆರೆದಳು.

**14. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು?**

**ಉತ್ತರ:** ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಸೋದರನಾದ ಸೂರ್ಯಮಿತ್ರನ ಬಳಿಗೆ ಕಳುಹಿಸಿದಳು.

**15. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?**

**ಉತ್ತರ:** ಕವಿಯು ನೋಡಿದ ಅಡಕೆಯ ತೋಟ ವನದಂಚಿನಲ್ಲಿದೆ.

**16. ಹಲಗಲಿಯ ನಾಲ್ವರು ಪ್ರಮುಖರು ಯಾರು?**

**ಉತ್ತರ:** ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಈ ನಾಲ್ವರು ಹಲಗಲಿಯ ಪ್ರಮುಖರು.

**17. ಪೈಗಳೂ ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರೇನು?**

**ಉತ್ತರ:** ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರು – ಮಕರಾಕ್ಷಸನ ಕಾಳಗ.

**IV. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10*2=20**

**18. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.**

**ಉತ್ತರ:** ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರಗಾಡಿಯ ಎತ್ತುಗಳು ಮುಂದೆ ಹೋಗದೆ ನಿಂತವು. ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಗಂಟೆಯ ಸದ್ದನ್ನು ಕೇಳಿದ ಹುಲಿಯು ಕೆಲವು ನಿಮಿಷ ತಡೆದು ರೈತರ ಮಾತು ಕೇಳಿ ಬಂದ ಮೇಲೆ ನಿರಾಶೆಯಿಂದ ಪಲಾಯನ ಮಾಡಿತು. ಅನಂತರ ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಮುಂದೆ ಬಂದರು. ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು, ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

**19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?**

**ಉತ್ತರ :** ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 'ಗ್ರಾಮ ನಿರ್ಮಲೀಕರಣ, ವೈದ್ಯ ಸಹಾಯ, ವಿದ್ಯಾ ಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ' ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು.

**20. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನ್ಯಾಯ ವಿಧಾಯಕ ಸಭೆ ಹೇಗೆ ಕಾರ್ಯ ನಿರ್ವಹಿಸುತ್ತಿತ್ತು?**

**ಉತ್ತರ:** ನಾಲ್ವಡಿ ಕೃಷ್ಣರಾಜರು 1907ರಲ್ಲಿ ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿದರು. ಇದರಲ್ಲಿ ಜನರಿಂದ ಆಯ್ಕೆಯಾದವರು 22 ಸದಸ್ಯರು. ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಸಂಸ್ಥೆ, ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲಾ ವಿಷಯಗಳನ್ನು ವಿಮರ್ಶಿಸುವ ಅಧಿಕಾರ ಆ ಸಭೆಗೆ ಇದ್ದಿತು. ಮುಖ್ಯವಾಗಿ ಯಾವುದೇ ಕಾನೂನನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು. ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

**21. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?**

**ಉತ್ತರ:** ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ "ಅಯ್ಯೋ ಆ ಮಹಿಳೆ ಯಾವ ರೀತಿ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ನಾನು ಈಗ ಆ ಮನೆಯ ಕದವನ್ನು ತಟ್ಟಿದರೆ ಪರಿಣಾಮ ಏನಾಗಬಹುದು? ವಿಮಾನ ದಾಳಿಯಿಂದ ತಪ್ಪಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮ ಪಾಲಿಸಲಾಗುತ್ತಿದೆ. ಇಂತಹ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ? ಎಂಬ ಪ್ರಶ್ನೆಗಳು ಮೂಡಿದವು.

**22. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**

**ಉತ್ತರ :** ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ರಾಮನು ಒಬ್ಬನೇ ವೀರನು, ಇದು ಅವನ ಯಾಗದ ಕುದುರೆ ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ" ಎಂದು ಬರೆಯಲಾಗಿತ್ತು.

**23. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**

**ಉತ್ತರ :** ಲವನು ಆಶ್ರಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು "ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು" ಎಂದು ಹೇಳಿದರು. ಆಗ ಲವನು ನಗುತ" ಬ್ರಾಹ್ಮಣರ ಮಕ್ಕಳು ಹೆದರಿದರೆ, ಜಾನಕಿಯ ಮಗನು ಇದಕ್ಕೆ ಹೆದರುವನೇ? ನೀವು ಹೋಗಿ" ಎಂದು ಶೌರ್ಯದಿಂದ ಹೇಳಿದನು.

**24. ರಕ್ತಸಿಕ್ತವಾಗಿದ್ದ ಮಣ್ಣನ್ನು ಭಗತ್‌ಸಿಂಗ್ ಹೇಗೆ ಜೋಪಾನ ಮಾಡಿದನು?**

**ಉತ್ತರ:** ಪವಿತ್ರವಾದ ರಕ್ತಸಿಕ್ತವಾಗಿದ್ದ ಮಣ್ಣಿನಿಂದ ತುಂಬಿದ ಡಬ್ಬಿಯನ್ನು ಮನೆಯ ಸ್ವಚ್ಛವಾದ ಜಾಗದಲ್ಲಿ ಇರಿಸಿದ. ಹೂಗಳನ್ನು ಅದರ ಮೇಲಿಟ್ಟು ಭಕ್ತಿಯಿಂದ ನಮಸ್ಕರಿಸಿದ. ಅಂದಿನಿಂದ ಅನೇಕ ವರ್ಷಗಳವರೆಗೆ ಆ ಮಣ್ಣನ್ನು ಪೂಜಿಸುವುದು ಅವನ ದಿನನಿತ್ಯವಾದ ಆಚರಣೆಯಾಯಿತು.

**25. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?**

**ಉತ್ತರ:** ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಅರಿತ ಗಾಂಧೀಜಿ ತನ್ನ ಬರಹವನ್ನು ತಿದ್ದಿಕೊಳ್ಳಬೇಕೆಂದು ಪ್ರಯತ್ನಿಸಿದರು. ಒಳ್ಳೆಯ ಬರೆವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಲಿ ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರು ಹೇಳಿದ್ದಾರೆ.

**26. ಜ್ಞಾನಿ – ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವೇನು?**

**ಉತ್ತರ:** ಅರಿಯದವರೊಡನೆ ಸ್ನೇಹ ಮಾಡಿದರೆ ಕಲ್ಲನ್ನು ಹೊಡೆದು ಕಿಡಿಯ ಹೊತ್ತಿಸಿಕೊಂಡಂತೆ, ಬಲ್ಲವರೊಂದಿಗೆ ಸ್ನೇಹವ ಮಾಡಿದರೆ ಮೊಸರ ಕಡೆದು ಬೆಣ್ಣೆಯ ತೆಗೆದುಕೊಂಡಂತೆ, ಚೆನ್ನಮಲ್ಲಿಕಾರ್ಜುನ ದೇವ ನಿಮ್ಮ ಶರಣರ ಸ್ನೇಹವ ಮಾಡಿದರೆ ಕರ್ಪೂರದ ಗಿರಿಗೆ ಬೆಂಕಿ ತಗುಲಿದಂತೆ. ಯಾವುದಾದರು ವಸ್ತುವಿಗೆ ಬೆಂಕಿ ತಗುಲಿದರೆ ಅದು ಸುಟ್ಟು ಹೋಗಿ ಬೂದಿ ಉಳಿಯುತ್ತದೆ. ಆದರೆ ಕರ್ಪೂರದ ಗಿರಿಗೆ ಬೆಂಕಿ ತಗುಲಿದರೆ ಯಾವ ಶೇಷವೂ ಉಳಿಯಲಾರದು. ಇದು ಭಕ್ತರು ಭಗವಂತನಲ್ಲಿ ಲೀನವಾಗುವ ಭಾವವಾಗಿದೆ ಎಂದು ಅಕ್ಕಮಹಾದೇವಿಯು ಹೇಳಿದ್ದಾಳೆ.

**27. ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿ?**

**ಉತ್ತರ:** ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ ಮೀಹ, ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು, ಬೊಜ್ಜು ಬೆಳೆಯದೆ ಬರುವ ಗುರುತ್ವ, ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ, ಪಂಜು ಇಲ್ಲದೆ ಬೆಳಗುವ ಬೆಳಕು, ಉದ್ವೇಗ ಬರಿಸದ ಜಾಗರಣೆ – ಇವು ಗುರೂಪದೇಶದ ಗುಣಗಳಾಗಿವೆ.

**V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2*3=6**

**28. ದೇವನೂರ ಮಹಾದೇವ**

ದೇವನೂರ ಮಹಾದೇವ (ಕ್ರಿ.ಶ.1948) ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕು ದೇವನೂರಿನವರು. ಇವರು. **ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೊ, ನಂಬಿಕೆಯನೆಂಟ, ನೋಡು ಮತ್ತು ಕೂಡು, ಎದೆಗೆ ಬಿದ್ದ ಅಕ್ಷರ** ಶ್ರೀಯುತರ ಪ್ರಮುಖ ಕೃತಿಗಳು.

ಇವರ **ಕುಸುಮಬಾಲೆ** ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, **ಒಡಲಾಳ** ಕೃತಿಗೆ ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

**29. ಕುಮಾರವ್ಯಾಸ**

ಕುಮಾರವ್ಯಾಸ ಎಂದೇ ಪ್ರಸಿದ್ಧನಾಗಿರುವ **ಗದುಗಿನ ನಾರಣಪ್ಪ**ರು ಕ್ರಿ.ಶ.1430 ರಲ್ಲಿ ಗದಗ ಪ್ರಾಂತದ **ಕೋಳಿವಾಡ**ದಲ್ಲಿ ಜನಿಸಿದರು. ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರನ್ನು ಹೊಂದಿರುವ **'ಕರ್ಣಾಟ ಭಾರತ ಕಥಾ ಮಂಜರಿ'** ಎಂಬ ಕಾವ್ಯವನ್ನು ಬರೆದು ಖ್ಯಾತನಾದ ಈತ **'ಐರಾವತ'** ಎಂಬ ಕೃತಿಯನ್ನೂ ರಚಿಸಿದ್ದಾರೆಂದು ತಿಳಿದು ಬಂದಿದೆ.

ಇವರು **"ರೂಪಕ ಸಾಮ್ರಾಜ್ಯ ಚಕ್ರವರ್ತಿ"** ಎಂಬ ಬಿರುದಿಗೆ ಪಾತ್ರನಾಗಿದ್ದಾರೆ.

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1*3=3**

30.

| 3 | 4 | 3 | 4 | |
|---|---|---|---|---|
| –U | –– | –U | –– | |
| ಏನು | ಹೇಳೈ | ಕರ್ಣ | ಚಿತ್ತ | = 14 |

| 3 | 4 | 3 | 4 | |
|---|---|---|---|---|
| – U | – U U | UUU | –– | |
| ಗ್ಲಾನಿ | ಯಾವುದು | ಮನಕೆ | ಕುಂತೀ | = 14 |

| 3 | 4 | 3 | 4 | 3 | 4 | | |
|---|---|---|---|---|---|---|---|
| – U | UU UU | –U | – U U | – U | – UU | – | |
| ಸೂನು | ಗಳ ಬೆಸ | ಕೈಸಿ | ಕೊಂಬುದು | ಸೇರ | ದೇ ನಿನ | ಗೆ | = 23 |

ಛಂದಸ್ಸಿನ ಹೆಸರು : **ಭಾಮಿನಿ ಷಟ್ಪದಿ**

**VII. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿ ಬರೆಯಿರಿ.** **1*3=3**

**31. "ಮಾರಿಗೌತಣವಾಯ್ತುನಾಳಿನ ಭಾರತವು"**

**ಅಲಂಕಾರ** : ರೂಪಕಾಲಂಕಾರ

**ಲಕ್ಷಣ** : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.

**ಉಪಮೇಯ** : ನಾಳಿನ ಭಾರತ ಯುದ್ಧ

**ಉಪಮಾನ** : ಮಾರಿಗೌತಣ

**ಸಮನ್ವಯ** : ಇಲ್ಲಿ ಉಪಮೇಯವಾದ 'ನಾಳಿನ ಭಾರತ ಯುದ್ಧ' ವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ. ಆದುದರಿಂದ ಇದು ರೂಪಕಾಲಂಕಾರ.

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1*3=3**

**32. ತಾಳಿದವನು ಬಾಳಿಯಾನು.**

ಗಾದೆಗಳು ಜನಪದರ ಜೀವನದ ಅನುಭವದಿಂದ ಬಂದ ನುಡಿಮುತ್ತುಗಳಾಗಿದ್ದು, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಲ್ಲಿ ಗಾದೆಯ ಮಹತ್ವ ಅಡಗಿದೆ. **'ತಾಳಿದವನು ಬಾಳಿಯಾನು'** ಎಂಬುದು ಪ್ರಸಿದ್ಧ ಗಾದೆ ಮಾತಾಗಿದೆ.

ಗಿಡ ನೆಟ್ಟ ಕೂಡಲೇ ಫಲ ಬಿಡಬೇಕು ಎಂದರೆ ಸಾಧ್ಯವಿಲ್ಲ. ಸಾಧನೆಯನ್ನು ಮಾಡಬೇಕಾದರೆ ತಾಳ್ಮೆ ಬೇಕು. ತಾಳ್ಮೆ ಎಂದರೆ ಆಮೆಗತಿಯಲ್ಲಿ ಸಾಗುವುದು ಎಂದರ್ಥವಲ್ಲ. ಯಾವ ಸಾಧನೆಗೆ ಎಷ್ಟು ಸಮಯ ಮತ್ತು ಪ್ರಯತ್ನಗಳು ಬೇಕೋ ಅವನ್ನು ಪೂರ್ಣತೆಯಿಂದ ಮಾಡಲು ಬೇಕಾಗುವ ಶಕ್ತಿಯೇ ತಾಳ್ಮೆ; ತಾಳ್ಮೆಯಿಂದ ಕಟ್ಟಿದ್ದು ಮತ್ತು ಪಡೆದಿದ್ದು ದೀರ್ಘಕಾಲ ಬಾಳುತ್ತದೆ. ***ಆತುರದಾರನಿಗೆ ಬುದ್ದಿಮಟ್ಟ*** ಎಂಬ ನೀತಿ, ದಾಸಶ್ರೇಷ್ಠರ **'ತಾಳುವಿಕೆಗಿಂತ ತಪವು ಇಲ್ಲ'** ಎಂಬ ಈ ಗಾದೆಯ ಮಹತ್ವವನ್ನು ಧ್ವನಿಸುತ್ತವೆ.

**ಅಥವಾ**

**ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಸಾರುತ್ತದೆ. **ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು** ಎಂಬುದು ಪ್ರಸಿದ್ಧ ಗಾದೆ ಮಾತಾಗಿದೆ.

ತಾಯಿ ನಮ್ಮನ್ನು ಒಂಬತ್ತು ತಿಂಗಳು ತನ್ನ ಗರ್ಭದಲ್ಲಿಟ್ಟುಕೊಂಡು ಪೋಷಿಸಿದರೆ, ಹೊತ್ತನಾಡು ನಮ್ಮನ್ನು ಜೀವನಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. **'ತಾಯಿಗಿಂತ ಬಂಧುವಿಲ್ಲ'** ವೆಂಬ ಮಾತಿನಂತೆ ಹೆತ್ತತಾಯಿಯ ಮಡಿಲಿನಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಬೇರೊಂದಿಲ್ಲ. ಅದೇ ರೀತಿ ಜನ್ಮಭೂಮಿಯ ಸಂಬಂಧವು ಸಹ ಬಿಡಿಸಲಾಗದಂತಹುದು. ನಮ್ಮ ನಾಡಿನಲ್ಲಿ ನಮಗೆ ದೊರೆಯುವ ಆನಂದ ಮತ್ತೆ ಎಲ್ಲೂ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲಾದುದು. **'ಸುಖದಿ ತಾನಿದ್ದುದೇ ನಾಡು'** ಎಂಬ ಸರ್ವಜ್ಞನ ಮಾತೂ, ರಾಮಾಯಣ ಮಹಾಕಾವ್ಯದಲ್ಲಿ ಶ್ರೀರಾಮನೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

**IX. ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6*3=18**

**33. "ಒಬ್ಬ ತಾಯಿಯ ಗಾನದ ಶ್ರುತಿಯಂತೆ"**

**ಆಯ್ಕೆ:** ಈ ವಾಕ್ಯವನ್ನು ಎಂ. ಮರಿಯಪ್ಪ ಭಟ್ಟರವರ **'ಕನ್ನಡ ಸಂಸ್ಕೃತಿ'** ಕೃತಿಯಿಂದ ಆಯ್ದ 'ನಮ್ಮ ಭಾಷೆ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಸ್ವಭಾಷೆಯನ್ನು ಪ್ರೀತಿಸಬೇಕು, ಗೌರವಿಸಬೇಕು, ಬೆಳೆಸಬೇಕು ಎಂದರೆ ಅನ್ಯಭಾಷೆಗಳನ್ನು ತಿರಸ್ಕರಿಸಬೇಕು ಎಂದು ಅರ್ಥವಲ್ಲ. ಭಾಷೆಗಳಲ್ಲಿ ಮೇಲು– ಕೀಳೆಂಬುದಿಲ್ಲ. ನಾಲ್ಕು ಜನ ಮಾತನಾಡುತ್ತಿದ್ದ ಭಾಷೆಗೂ ನಲವತ್ತು ಲಕ್ಷ ಜನ ಮಾತನಾಡುತ್ತಿದ್ದ ಭಾಷೆಗೂ ಸತ್ಯ ಹಾಗೂ ಸತ್ಯದೃಷ್ಟಿಯಿಂದ ಅಂತರವೇ ಇಲ್ಲ. ಎಲ್ಲ ಭಾಷೆಗಳೂ ಅಷ್ಟೇ ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ಭಾರತೀಯರಾದ ನಾವು ನೆರೆಹೊರೆಯ ಭಾಷೆಗಳನ್ನು ದ್ವೇಷಿಸದೆ, ನಮ್ಮ ನಮ್ಮ ಭಾಷೆಗಳನ್ನು ಗೌರವಿಸಿ, ಪ್ರೀತಿಸಿ ಅಭಿವೃದ್ಧಿಗೊಳಿಸಿದರೆ ದೇಶದ ಸಂಸ್ಕೃತಿ ಮುಂದುವರಿಯುತ್ತದೆ ಎಂಬ ಲೇಖಕರ ಮಾತು ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

**34. "ಹೊತ್ತು ! ಹೊತ್ತು ! ಹೊತ್ತೇ ಹಣ."**

**ಆಯ್ಕೆ:** ಈ ವಾಕ್ಯವನ್ನು ವಿ.ಕೃ. ಗೋಕಾಕ್ ಅವರು ರಚಿಸಿರುವ 'ಸಮುದ್ರದಾಚೆಯಿಂದ' ಎಂಬ ಪ್ರವಾಸ ಕಥನದಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಲಂಡನ್ ನಗರದ ಬೀದಿಯಲ್ಲಿ ಲಕ್ಷಾನುಲಕ್ಷ ಜನರು ತಿರುಗಾಡುತ್ತಾರೆ. ಅವಸರದಿಂದ ಓಡುತ್ತಾರೆ. ವಿದೇಶಿಯರು ಹಣಗಳಿಸಲು ಅವಸರ ಪಡುತ್ತಾರೆ. ಅವರಿಗೆ ಸಮಯವೇ ಹಣ. **"ಹೊತ್ತು ! ಹೊತ್ತು ! ಹೊತ್ತೇ ಹಣ"** ಇದು ಅಕ್ಷರಶಃ ವಿಲಾಯಿತಿ(ವಿದೇಶ)ಯಲ್ಲಿ ನಿಜವಾಗಿದೆ ಎಂದು ಹೇಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ವಿದೇಶಗಳ ಜನರು ಹಣಗಳಿಸಲು ಅತಿ ಸಮಯವನ್ನು ನೀಡುತ್ತಾರೆ. ಸಮಯವೇ ಅವರಿಗೆ ಹಣ ಎಂಬ ಮಾತು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತವಾಗಿದೆ.

**35. "ಕಣ್ಣ ನೀರಂ ತೀವಿ ನೆಲನಂ ಬರೆಯುತ್ತಿರೆ"**

**ಆಯ್ಕೆ:** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ವಿರಚಿತ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ 'ಅಗ್ನಿಭೂತಿ ವಾಯುಭೂತಿಯರ ಕಥೆ' ಎಂಬ ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಅತಿಬಲ ಮಹಾರಾಜನು ಸೋಮಶರ್ಮನ ಸಾವಿನ ನಂತರ ಕರೆಸಿ, ಪೂರ್ಣ ಸ್ನಾನ ಮಾಡಿಸಿ, ಬಟ್ಟೆಯುಡಿಸಿ, ತಕ್ಕ ಭೂಷಣಗಳನ್ನು ಕೊಡಿಸಿ ಊಟ ಮಾಡಿಸಿದನು. ತಾಂಬೂಲ ಕೊಟ್ಟು ನೀವು ದುಃಖ ಪಡದಿರಿ ಎಂದು ಸಮಾಧಾನ ಹೇಳಿ ಮನೆಗೆ ಕಳುಹಿಸಿಕೊಟ್ಟನು. ಕೆಲವು ದಿನಗಳ ನಂತರ ಅವರನ್ನು ಕರೆಯಿಸಿ ನೀವು ಯಾವ ವಿದ್ಯೆಗಳನ್ನು ಬಲ್ಲಿರಿ? ಎಂದು ವಿಚಾರಿಸಿದನು. ಆಗ ಅವರು ತಲೆ ಬಗ್ಗಿಸಿ ಮಾತನಾಡದೇ ಕಣ್ಣೀರನ್ನು ತುಂಬಿ, ನಾಚಿಕೆಯಿಂದ ಕಾಲ ಬೆರಳಿನಿಂದ ನೆಲದ ಮೇಲೆ ಬರೆಯುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ನಾವು ಯಾವ ವಿದ್ಯೆಗಳನ್ನು ತಿಳಿದಿಲ್ಲ ಎಂದು ನಾಚಿಕೆಯಿಂದ ತಲೆ ತಗ್ಗಿಸಿ ನಿಂತಿರುವ ಭಾವ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**36. "ಹೊಸ ಭರವಸೆಗಳ ಕಟ್ಟೋಣ."**

**ಆಯ್ಕೆ:** ಈ ವಾಕ್ಯವನ್ನು ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ 'ಎದೆ ತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** "ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು" ಎಂದು ಕವಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**ಸ್ವಾರಸ್ಯ:** ಕವಿ "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂಬ ಮಾತು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**37. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್ "**

**ಆಯ್ಕೆ:** ಈ ವಾಕ್ಯವನ್ನು ಕುವೆಂಪುರವರ 'ಪಕ್ಷಿಕಾಶಿ' ಕವನ ಸಂಕಲನದಿಂದ ಆರಿಸಲಾಗಿರುವ "ಹಸುರು" ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಅತ್ತ–ಇತ್ತ–ಎತ್ತಲೂ ಹಸುರೇ ಆವರಿಸಿರುವುದನ್ನು ಕವಿ ದೃಷ್ಟಿಯಿಂದ ನೋಡಿದ ಕುವೆಂಪು ಅವರು ಕಡಲಿನಲ್ಲಿ ಎಲ್ಲೆಲ್ಲೂ ಹಸುರೇ ಹಸುರು. ಕವಿಯ ಆತ್ಮ ಹಸುರು ನೆತ್ತರಿನಿಂದ ಹಸುರುಗಟ್ಟಿತು ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. ಎಲ್ಲೆಲ್ಲೂ ಹಸುರನ್ನು ಕಂಡ ಕವಿಯಾತ್ಮವು ಹಸುರುಗಟ್ಟಿತಲ್ಲದೆ ಅವರ ದೇಹದಲ್ಲಿನ ರಕ್ತವೂ ಹಸುರೇ! ಎಂದು ವರ್ಣಿಸಿದ್ದಾರೆ.

**ಸ್ವಾರಸ್ಯ:** ಹಸುರು ಕೇವಲ ಸಸ್ಯವರ್ಗಕ್ಕೆ ಮಾತ್ರ ಸೀಮಿತವಲ್ಲ ಇಡೀ ಪ್ರಕೃತಿಯ ಚೈತನ್ಯಕ್ಕೆ ಅದೇ ಕಾರಣ. ಪ್ರಕೃತಿಗಷ್ಟೇ ಅಲ್ಲದೆ ರಕ್ತದಲ್ಲೂ ಹಸುರು ವ್ಯಾಪಿಸಿದೆ ಎಂದು ಸ್ವಾರಸ್ಯ ಪೂರ್ಣವಾಗಿದೆ.

**38. "ಜೀವ ಸತ್ತು ಹೋಗುವುದು ಗೊತ್ತ"**

**ಆಯ್ಕೆ:** ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ:** ಬ್ರಿಟಿಷರು ಆಜ್ಞೆಯನ್ನು ಹೊರಡಿಸಿ, ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ, ನೀಡಿದರೆ ತಾವು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ಹಲಗಲಿಯ ಬೇಡರು ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು" ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*4=4**

39. ನೀಲಮೇಘಮಂಡಲ–ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
**ಹಕ್ಕಿ ಹಾರುತಿದೆ ನೋಡಿದಿರಾ?** **ಅಥವಾ**

**ಯುಗ–ಯುಗಗಳ** ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
**ಹಕ್ಕಿ ಹಾರುತಿದೆ ನೋಡಿದಿರಾ?**

**XI. ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1*4=4**

40. **ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ**
**ದಳವೊಡನೋದಿದೊಂದು ಬೆಜಗಿಂಗೆ ಕೊಲಲ್ಕೆನಗಾಗದೀ ಸಭಾ**
**ವಳಯದೊಳೆನ್ನನೇಟೆಸಿದ ನಿನ್ನನನಾಕುಳಮೆನ್ನ ಚಟ್ಟರಿಂ**
**ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ ॥**

**ಆಯ್ಕೆ :** ಈ ಪದ್ಯಭಾಗವನ್ನು ಪಂಪ ಮಹಾಕವಿ ರಚಿಸಿರುವ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಮೌಲ್ಯ:** "ನೊಣಕ್ಕೆ ಕಸವೇ ಶ್ರೇಷ್ಠ" ಎಂಬಂತೆ ವ್ಯಕ್ತಿಯ ಯೋಗ್ಯತೆಗೆ ತಕ್ಕಂತೆ ಗುಣ–ನಡತೆ ಅಭಿರುಚಿಗಳು ಇರುತ್ತವೆಂಬುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿದೆ.

ದ್ರೋಣನು "ಎಲೈ ದುಷ್ಟನೇ, ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು ಎಂಬ ಮಾತಿನಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದೆವು ಎಂಬ ಕಾರಣಕ್ಕೆ(ಉತ್ಸಾಹ) ನನಗೆ ನಿನ್ನನ್ನು ಕೊಲ್ಲಲಾಗದು. ಈ ಸಭೆಯಲ್ಲಿ ನನ್ನನ್ನು ಅವಮಾನಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ಗಾಬರಿಯಾಗುವಂತೆ ಕಟ್ಟಿಸದೆ ಇದ್ದರೆ, ಈ (ಸುಮ್ಮನೆ) ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ?" ಎಂದು ಪ್ರತಿಜ್ಞೆ ಮಾಡಿದನು.

**XII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 2*4=8**

**41. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?**

**ಉತ್ತರ:** ಧನು ಮಹರ್ಷಿಗಳ ಸೂಚನೆಯಂತೆ ಶ್ರೀರಾಮ ಲಕ್ಷ್ಮಣರು ಆಶ್ರಮದ ಮುಂದೆ ಬಂದು ನಿಂತಿರುವುದ ಕಂಡು ಶಬರಿ ಬೆರಗಾದಳು. ಬೆರಗು ಕಳೆದ ಮೇಲೆ ರಾಮನ ಹತ್ತಿರಕ್ಕೆ ಬಂದು ಮೈಯನ್ನು ಮುಟ್ಟಿ ಪಾದಕ್ಕೆ ಬಿದ್ದಳು. ಕೈಯನ್ನು ಕಣ್ಣಿಗೆ ಒತ್ತಿಕೊಂಡು ಆನಂದದಿಂದ ಕಣ್ಣೀರನ್ನು ಸುರಿಸಿದಳು. ಬನ್ನಿರಿ ಎಂದು ಗದ್ಗದಿಸುತ್ತಾ, ಅಯ್ಯೋ! ಏನೂ ಸಿದ್ಧತೆಯೇ ಇಲ್ಲ. ನಿನ್ನೆಯಷ್ಟು ಚೆಂದವಿಲ್ಲ ಎನ್ನುತ್ತ ಬಹಳ ಹಂಬಲಿಸಿದಳು. ತನ್ನ ಮನದ ಬಯಕೆಯಂತೆ ಬಗೆ ಬಗೆಯ ಸುವಾಸನೆಯನ್ನು ಬೀರುವ ಕಾಡಿನ ಹೂವುಗಳಿಂದ ಮಾಡಿದ ಮಾಲೆಯನ್ನು ರಾಮನ ಕೊರಳಿಗೆ ಹಾಕಿ ಸಂಭ್ರಮಿಸಿದಳು. ತಾನು ತಂದಿದ್ದ ರುಚಿಯಾದ ಹಣುಗ್ಗಳನ್ನು ತಾನೆ ರಾಮಲಕ್ಷ್ಮಣರ ಕೈಯೊಳಗೆ ಇಟ್ಟು, ಜಗದೊಳಗೆ ಇದರಷ್ಟು ರುಚಿಯಾದ ಹಣ್ಣು ಯಾವುದು ಇಲ್ಲ, ನಿಮಗಾಗಿಯೇ ತಂದಿರುವೆನು ಎಂದು ತಿನ್ನಲು ಹೇಳಿದಳು. ಮಧುಪರ್ಕವನ್ನು ಸವಿಯಲು ಕೊಟ್ಟಳು. ಶಬರಿಯ ಆತಿಥ್ಯದಿಂದ ರಾಜಕುಮಾರರಾದ ರಾಮಲಕ್ಷ್ಮಣರು ತೃಪ್ತರಾದರು. ಇದನ್ನು ನೋಡಿದ ಶಬರಿ ಧನ್ಯತಾ ಭಾವದಿಂದ ಕೂಡಿದವಳಾದಳು. ಹೀಗೆ ಶಬರಿಯ ಸಡಗರ, ಸಂತೋಷ ಮೇಳದವರು ಹಾಡಿನಲ್ಲಿ ವರ್ಣಿಸುತ್ತಾರೆ.

**ಅಥವಾ**

**ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?**

**ಉತ್ತರ:** ಶಬರಿ ಮತಂಗಾಶ್ರಮದಲ್ಲಿ ಇದ್ದಳು. ಶ್ರೀರಾಮನ ಗುಣ ಸ್ವಭಾವಗಳ ಸೆಳೆತಕ್ಕೆ ಸಿಕ್ಕಿ ಅವನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂಬಂತೆ ಇರುತ್ತಾಳೆ. ಮತಂಗ ಋಷಿಗಳು ಶಬರಿಯ ಮನದ ಹಂಬಲವನ್ನು ತಿಳಿದು, ಇಲ್ಲಿಗೆ ಶ್ರೀರಾಮ ಬಂದೇ ಬರುತ್ತಾನೆ; ಅವನ ದರ್ಶನ ಪಡೆದರೆ ಮುಕ್ತಿ ಸಿಗುತ್ತದೆ ಎಂದು ಹೇಳಿದ್ದರು. ಅದರಂತೆ ಶಬರಿ ಮತಂಗ ಋಷಿಗಳ ಮಾತನ್ನು ನಂಬಿ ಶ್ರೀರಾಮನ ದರ್ಶನಕ್ಕಾಗಿ ಕಾಯುತ್ತಿದ್ದಳು. ಮತಂಗ ಋಷಿಗಳು ದಿವ್ಯಲೋಕವನ್ನು ಸೇರಿದ ಬಳಿಕ ರಾಮಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕಾಗಿ ಕಾದಿದ್ದಳು. ಶ್ರೀರಾಮಗಾಗಿ ದಿನಾಲೂ ಹೂ–ಹಣುಹ್ಣಂಪಲುಗಳನ್ನು ತಂದು ರಾಮ ಇಂದು ಬರುವನೋ, ಬರುವುದಿಲ್ಲವೋ ಎಂಬ ಚಿಂತೆಯಲ್ಲಿ ಇರುತ್ತಾಳೆ. ಮತಂಗರ ಮಾತಿನಂತೆ ಒಂದು ದಿನ ರಾಮಲಕ್ಷ್ಮಣರು ಮತಂಗಾಶ್ರಮಕ್ಕೆ ಬರುತ್ತಾರೆ.

ಶಬರಿಯು ಶ್ರೀರಾಮನ ದರ್ಶನದಿಂದ ಪುಳಕಿತಳಾಗುತ್ತಾಳೆ. ತನ್ನ ಮನದ ಬಯಕೆಯಂತೆ ಹೂಮಾಲೆಯನ್ನು ಹಾಕಿ, ಹಣ್ಣು ಹಂಪಲುಗಳನ್ನು ಕೊಟ್ಟು ತನ್ನ ಮನದ ಬಯಕೆಯನ್ನು ಈಡೇರಿಸಿಕೊಂಡು ಧನ್ಯಳಾಗುತ್ತಾಳೆ. ಮುಕ್ತಿಯನ್ನು ಪಡೆಯುತ್ತಾಳೆ. ಹೀಗೆ ತಾಳಿದವನು ಬಾಳಿಯಾನು ಎನ್ನುವಂತೆ ಶಬರಿ ಶ್ರೀರಾಮನಿಗೋಸ್ಕರ ಕಾದಳು. ಆದ್ದರಿಂದ ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ನಿಜವಾಗಿದೆ.

**42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.**

**ಉತ್ತರ:** "ಛಲದೊಳ್ ದುರ್ಯೋಧನಂ" ಎನ್ನುವ ಹಾಗೆ ಛಲವನ್ನೆ ಮುಖ್ಯ ಗುಣವುಳ್ಳವನು ದುರ್ಯೋಧನ. ಭೀಷ್ಮರ ಎದುರಿನಲ್ಲಿಯೇ ಸಂಧಿಗೆ ಒಪ್ಪದೆ ಯುದ್ಧ ಮಾಡಿಯೇ ತಿರಬೇಕೆಂಬ ಅವನ ಛಲದಗುಣ ಅವನ ಸ್ವಭಾವಕ್ಕೆ ತಕ್ಕನಾಗಿ ವ್ಯಕ್ತಗೊಂಡಿರುವುದನ್ನು 'ಛಲಮನೆ ಮೆಱೆವೆಂ' ಎಂಬ ಪದ್ಯದಲ್ಲಿ ನಿರೂಪಿತವಾಗಿದೆ. ಬೀಷ್ಮರು ಪಾಂಡವರನ್ನು ಒಪ್ಪಿಸುತ್ತೇನೆ, ಸಂಧಿ ಮಾಡಿಕೋ ಎಂದು ಹೇಳುತ್ತಾರೆ. ಆಗ ದುರ್ಯೋಧನನು ಒಪ್ಪದೆ ಛಲದ ಮಾತುಗಳನ್ನು ಹೀಗೆ ಹೇಳುತ್ತಾನೆ. "ನೆಲಕ್ಕಿರಿವೆನೆಂದು ಬಗೆದಿರೆ ಛಲಕ್ಕಿರಿವೆಂ" ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಕರ್ಣನನ್ನು ಕೊಲ್ಲಿಸಿದ ಈ ನೆಲ ನನಗೆ ಪಾಳುಬಿದ್ದ ನೆಲ. ಇಂತಹ ನೆಲನೊಡನೆ ಮತ್ತೆ ಬಾಳುವುದಿಲ್ಲ. ಪ್ರೀತಿಯ ಗೆಳೆಯ ಕರ್ಣ, ನನ್ನ ತಮ್ಮ ದುಶ್ಯಾಸನರನ್ನು ಕೊಂದ ಆ ಪಾರ್ಥ–ಭೀಮರನ್ನು ಇನ್ನು ಜೀವಂತವಾಗಿದ್ದಾರೆ ಅವರನ್ನು ಕೊಲ್ಲವುದೆ ನನ್ನ ಛಲವಾಗಿದೆ. ನನ್ನ ಮಕ್ಕಳು, ಒಡ ಹುಟ್ಟಿದ ಸಹೋದರರು ಹೋರಾಡಿ ಸತ್ತರು. ಆದ್ದರಿಂದ ನನ್ನಲ್ಲಿ ಕೋಪ ಹುಟ್ಟಿ ಅದಿಕವಾಯಿತು. ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ. ನಾನು ಹೋರಾಡದೆ ಬಿಡುವುದಿಲ್ಲ, ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ಈ ನೆಲ ಕೌರವನದಾಗಬೇಕು ಎಂಬ ಛಲದಿಂದ ಯುದ್ಧದ ನಿರ್ಧಾರವನ್ನು ಕೈಗೊಂಡು ಛಲವನ್ನೇ ಸಾಧಿಸುತ್ತಾನೆ ಎಂಬ ದುರ್ಯೋಧನನ ಮಾತುಗಳಲ್ಲಿ ಛಲದಗುಣ ಅಭಿವ್ಯಕ್ತವಾಗಿದೆ ಎಂದು ವಿವರಿಸಬಹುದು.

**ಅಥವಾ**

**ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ**

**ಉತ್ತರ:** ತಂದೆತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಬಾಣಗಳ ಹಾಸಿಗೆಯಲ್ಲಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬಂದ ದುರ್ಯೋಧನನಿಗೆ ಭೀಷ್ಮರು ಸಂಧಿಯ ಮಾತನ್ನು ಹೇಳುತ್ತಾರೆ. ಆಗ ದುರ್ಯೋಧನನು ತಾತ ನಾನು ನಿಮಗೆ ನಮಸ್ಕರಿಸಿ ಹೋಗಬೇಕೆಂದು ಬಂದನೇ ಹೊರತು ಶತ್ರುಗಳೊಂದಿಗೆ ಸಂಧಿ ಮಾಡಿಸಲೆಂದಲ್ಲ, ಅಜ್ಜ ನಾನು ಯುದ್ದವನ್ನೇ ಮಾಡುತ್ತೇನೆ. ರಣರಂಗದಲ್ಲಿ ನನ್ನ ಕಾರ್ಯವೇನು ತಿಳಿಸಿ ಎನ್ನುತ್ತಾ, **ನಾನು ನೆಲಕ್ಕಾಗಿ ಹೊರಾಡುತ್ತಿಲ್ಲ, ಛಲಕ್ಕಾಗಿ ಹೊರಾಡುತ್ತಿದ್ದೇನೆ.** ಪಾಂಡವರೊಂದಿಗೆ ಈ ನೆಲ ಪಾಳು ನೆಲವಿದ್ದಂತೆ. ನನ್ನ ಪ್ರಿಯ ಮಿತ್ರನಾದ ಕರ್ಣನನ್ನು ಕೊಲಿಸಿದ ನೆಲದೊಂದಿಗೆ ಮತ್ತೆ ಬಾಳಲು ಸಾಧ್ಯವಿಲ್ಲವೆಂದು ದಿಟ್ಟತನದಿಂದ ಉತ್ತರಿಸುತ್ತಾನೆ,

ಅಲ್ಲದೆ ತಾತ ಭೀಷ್ಮರಿಗೆ ನನ್ನ ಪ್ರಿಯ ಮಿತ್ರನಾದ ಕರ್ಣನನ್ನು, ತಮ್ಮ ದುಶ್ಯಾಸನನನ್ನು ಕೊಂದ ಭೀಮಾರ್ಜುನರು ಜೀವಂತವಾಗಿ ಇರುವವರೆಗೆ ಸಂಧಿ ಸಾಧ್ಯವಿಲ್ಲ. ಮೊದಲು ಆ ಇಬ್ಬರನ್ನು ಕೊಂದು, ನನ್ನ ಅಳಲು ತೀರಿದ ಬಳಿಕ ಧರ್ಮರಾಯನೊಂದಿಗೆ ಸಂಧಿ ಮಾಡಿಕೊಳ್ಳತ್ತೇನೆ ಎಂಬ ದಿಟ್ಟತನದ ಮಾತುಗಳನ್ನಾಡುವವನು. ಮುಂದುವರೆದು ಹುಟ್ಟಿದ ನೂರು ಮಕ್ಕಳು, ನನ್ನ ಒಡವುಟ್ಟಿದ ನೂರು ಸಹೋದರರು ಹೋರಾಡಿ ಸತ್ತರು. ಅದರಿಂದ ನನ್ನ ಕೋಪವು ಅಧಿಕವಾಯಿತು. ಸತ್ತವರು ಮತ್ತೆ ಹುಟ್ಟುವುದಿಲ್ಲವೇ? ನಾನು ಪಾಂಡವರೊಂದಿಗೆ ಹೋರಾಡಿ ಛಲವನನ್ನೇ ಮೆರೆಯುತ್ತೇನೆ ಎಂದನು.

ದುರ್ಯೋಧನನು ತಾತ ನಾನು ಪಾಂಡವರೊಂದಿಗೆ ಹೋರಾಡದೆ ಇರಲಾರೆನು. ಇಂದಿನ ಒಂದು ದಿನದ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ನಾನು ಉಳಿಯಬೇಕು. ಅದರಿಂದ ಈ ಭೂಮಿಯ ಒಡೆತನ ನನಗೆ ಇಲ್ಲವೆ ಪಾಂಡವರಿಗೆ ಆಗಬೇಕು ಎಂದು ತನ್ನ ನಿರ್ಧಾರವನ್ನು ತಿಳಿಸಿದನು. ಈ ರೀತಿಯಾಗಿ ದುರ್ಯೋಧನನ ಛಲದ ಗುಣ, ಅವನ ಸ್ವಭಾವಕ್ಕೆ ತಕ್ಕುದಾಗಿ ನಿರೂಪಿತಗೊಂಡಿದೆ.

**XIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

**43.** ವಿವೇಕಾನಂದರ ಧಾರ್ಮಿಕ ಚಿಂತನೆಗಳನ್ನು ಅವಲೋಕಿಸಿದಾಗ ಅವರು ಸ್ಪಷ್ಟವಾಗಿ ಕೋಮುವಾದ ವಿರೋಧಿಯಾಗಿದ್ದರೆಂದು ತಿಳಿದುಬರುತ್ತದೆ. ಕೋಮುವಾದವು ಏಕಧರ್ಮ ಮತ್ತು ಏಕಸಂಸ್ಕೃತಿಯೇ ಶ್ರೇಷ್ಠವೆಂದೂ ಅದೇ ಅಂತಿಮವೆಂದೂ ನಂಬುತ್ತ ನಂಬಿಸುತ್ತ, ಪರಮಧರ್ಮ ದ್ವೇಷವನ್ನು ಬಿತಿ ಬೆಳೆಸುತ್ತದೆ. ಇಂತಹ ಪ್ರವೃತ್ತಿಗೆ ವಿವೇಕಾನಂದರು ಕಟ್ಟಾ ವಿರೋಧಿಯಾಗಿದ್ದರು. ಕುವೆಂಪು ಅವರು ಹೇಳುವಂತೆ ಅವರು 'ಮಾನವತಾಮಿತ್ರ'ರಾಗಿದ್ದರು. "ಮನುಷ್ಯತ್ವದ ಮಹಿಮೆಯನ್ನು ಎಂದಿಗೂ ಮರೆಯಬೇಡಿ. ನಮಗಿಂತಲೂ ಬೇರೆಯಾದ ದೇವರು ಹಿಂದೆ ಇರಲಿಲ್ಲ. ಮುಂದೆ ಬರುವುದಿಲ್ಲ. ಕ್ರೈಸ್ತ, ಬುದ್ಧ, ಕೃಷ್ಣ, ರಾಮರೆಲ್ಲ ಅಹಮಸ್ಮಿ ಎಂಬ ಮಹಾವಾರಿಧಿಯ ತರಂಗಗಳು ಮಾತ್ರ" ಎಂದು ಘೋಷಿಸಿದರು. ವಿವೇಕಾನಂದರ 'ಧೀರೋದಾತ್ತ' ನಿಲುವುಗಳು ವೈಯಕ್ತಿಕ ಮಾತ್ರವಾಗದೆ ಸಾಮಾಜಿಕವಾಗಿ ರೂಪಾಂತರಗೊಂಡು ಗಟ್ಟಿಯಾದದ್ದೇ ಅವರ ವ್ಯಕ್ತಿತ್ವದ ವಿಶೇಷ; ಅವರದು ಪ್ರಖರ ಸಾಮಾಜಿಕ ವ್ಯಕ್ತಿತ್ವ, ದೀನ ದಲಿತರ ಉದ್ಧಾರವೇ ಅವರ ಧರ್ಮದ ಮೊದಲ ತತ್ವ; ಅದೇ ಅವರ ವೈಚಾರಿಕ ಸತ್ವ ಆದ್ದರಿಂದ ವಿವೇಕಾನಂದರು ಇಂದಿಗೂ ಸತ್ಯ.

**ಪ್ರಶ್ನೆಗಳು:**

**1. ವಿವೇಕಾನಂದರು ಇಂದಿಗೂ ಸತ್ಯ ಕಾರಣವೇನು?**

**ಉತ್ತರ:** ವಿವೇಕಾನಂದರ 'ಧೀರೋದಾತ್ತ' ನಿಲುವುಗಳು ವೈಯಕ್ತಿಕ ಮಾತ್ರವಾಗದೆ ಸಾಮಾಜಿಕವಾಗಿ ರೂಪಾಂತರಗೊಂಡು ಗಟ್ಟಿಯಾದದ್ದೇ ಅವರ ವ್ಯಕ್ತಿತ್ವದ ವಿಶೇಷ; ಅವರದು ಪ್ರಖರ ಸಾಮಾಜಿಕ ವ್ಯಕ್ತಿತ್ವ, ದೀನ ದಲಿತರ ಉದ್ಧಾರವೇ ಅವರ ಧರ್ಮದ ಮೊದಲ ತತ್ವ; ಅದೇ ಅವರ ವೈಚಾರಿಕ ಸತ್ವ ಆದ್ದರಿಂದ ವಿವೇಕಾನಂದರು ಇಂದಿಗೂ ಸತ್ಯ.

**2. ವಿವೇಕಾನಂದರು ಕೋಮುವಾದ ಕಟ್ಟಾ ವಿರೋಧಿಯಾಗಿದ್ದರು ಏಕೆ?**

**ಉತ್ತರ:** ಕೋಮುವಾದವು ಏಕಧರ್ಮ ಮತ್ತು ಏಕಸಂಸ್ಕೃತಿಯೇ ಶ್ರೇಷ್ಠವೆಂದೂ ಅದೇ ಅಂತಿಮವೆಂದೂ ನಂಬುತ್ತ ನಂಬಿಸುತ್ತ, ಪರಮಧರ್ಮ ದ್ವೇಷವನ್ನು ಬಿತಿ ಬೆಳೆಸುತ್ತದೆ. ಇಂತಹ ಪ್ರವೃತ್ತಿಗೆ ವಿವೇಕಾನಂದರು ಕಟ್ಟಾ ವಿರೋಧಿಯಾಗಿದ್ದರು.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನಾಧರಿಸಿ ಪತ್ರ ಬರೆಯಿರಿ. 1*5=5**

44. **ನಿಮ್ಮನ್ನು ತುಮಕೂರು ಜಿಲ್ಲೆ, ಮಧುಗಿರಿ ಸರ್ಕಾರಿ ಪ್ರೌಢಶಾಲೆಯ ಚಿನ್ಮಯ ಎಂದು ಭಾವಿಸಿಕೊಂಡು, ಶಾಲಾ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಕಳುಹಿಸಿ ಕೊಡುವಂತೆ ಬೆಂಗಳೂರಿನ ವಿಜ್ಞಾನ ಪರಿಷತ್ತಿನ ಅಧ್ಯಕ್ಷರಿಗೊಂದು ಮನವಿ ಪತ್ರವನ್ನು ಬರೆಯಿರಿ.**

**ದಿನಾಂಕ:––/––/––**

**ಇಂದ,**

ಚಿನ್ಮಯ,
10ನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
ಮಧುಗಿರಿ, ತುಮಕೂರು ಜಿಲ್ಲೆ.

**ಇವರಿಗೆ,**

ಅಧ್ಯಕ್ಷರು,
ವಿಜ್ಞಾನ ಪರಿಷತ್ತು,
ಬೆಂಗಳೂರು.

**ಮಾನ್ಯರೇ,**

**ವಿಷಯ : ಶಾಲಾ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಕಳುಹಿಸಿ ಕೊಡುವ ಬಗ್ಗೆ.**

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯ ಗ್ರಂಥಾಲಯದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳ ಕೊರತೆ ಇದ್ದು, ತಮ್ಮ ಪ್ರಕಾಶನದ ಪುಸ್ತಕಗಳನ್ನು ಕಳುಹಿಸಿ ಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.
ಸದರಿ ಪುಸ್ತಕಗಳ ಮೊತ್ತವನ್ನು ತಮ್ಮ ಖಾತೆಗೆ ಜಮೆ ಮಾಡಿದ್ದು, ರಶೀದಿಯನ್ನು ಪತ್ರದೊಂದಿಗೆ ಲಗತ್ತಿಸಲಾಗಿದೆ.

**ವಂದನೆಗಳೊಂದಿಗೆ,**

**ಇಂತಿ ತಮ್ಮ ವಿಶ್ವಾಸಿ**

ಚಿನ್ಮಯ

**ಅಥವಾ**

**ನಿಮ್ಮನ್ನು ಮೈಸೂರಿನ ಜೆ. ಎಸ್. ಎಸ್ ಪ್ರೌಢಶಾಲೆಯ ವಿದ್ಯಾರ್ಥಿ ನಯನಶ್ರೀ ಎಂದು ಭಾವಿಸಿಕೊಂಡು, ನಾಗಮಂಗಲದಲ್ಲಿ ವಾಸವಾಗಿರುವ ಗೆಳಯ ಶ್ಯಾಮ್‌ಗೆ ನಿಮ್ಮ ಶಾಲೆಯಲ್ಲಿ ಆಚರಿಸಿದ ಮತದಾರರ ದಿನದ ಕುರಿತು ಪತ್ರ ಬರೆಯಿರಿ.**

**ಇಂದ**

ನಯನಶ್ರೀ

10ನೇ ತರಗತಿ

ಜೆ.ಎಸ್.ಎಸ್‌ಪ್ರೌಢಶಾಲೆ,

ಮೈಸೂರು.

**ದಿನಾಂಕ: -------**

**ಆತ್ಮೀಯ ಗೆಳಯನಿಗೆ,**

ನಿನ್ನ ಗೆಳತಿ ಮಾಡುವ ವಂದನೆಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ, ನೀನೂ ಸಹ ಕ್ಷೇಮವೆಂದು ಭಾವಿಸಿರುತ್ತೇನೆ.

ಈ ಪತ್ರವನ್ನು ಬರೆದ ಉದ್ದೇಶವೇನೆಂದರೆ ನಾನು ಉತ್ತಮವಾಗಿ ಅಭ್ಯಾಸ ಮಾಡುತ್ತಿದ್ದು, ದಿನಾಂಕ:25-01-202_ರಂದು ನಮ್ಮ ಶಾಲೆಯಲ್ಲಿ ಮತದಾರರ ದಿನವನ್ನು ಆಚರಿಸಲಾಯಿತು. ನಾನು ಕಾರ್ಯಕ್ರಮದಲ್ಲಿ ಇಂದಿನ ಮಕ್ಕಳೇ ಮುಂದಿನ ಪ್ರಜೆಗಳಾಗಿ ಮತದಾನದ ಮಹತ್ವ ಅರಿತು, ಜಾಗೃತಿ ಮೂಡಿಸುವ ಬಗೆಗೆ ಭಾಷಣ ಮಾಡಿದೆ. ಕಾರ್ಯಕ್ರಮ ಅರ್ಥ ಪೂರ್ಣವಾಗಿತ್ತು. ಊರಿಗೆ ಬಂದಾಗ ಭೇಟಿ ಮಾಡುವೆ.

**ವಂದನೆಗಳೊಂದಿಗೆ,**

**ಇಂತಿ ನಿಮ್ಮ ಮಗಳು**

ನಯನಶ್ರೀ

**ಹೊರ ವಿಳಾಸ**

**ಗೆ,**

ಶ್ಯಾಮ್

ನಾಗಮಂಗಲ.

**XV. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು 10-15 ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5**

**45. ತ್ಯಾಜ್ಯ ವಸ್ತುಗಳ ನಿರ್ವಹಣೆ**

**ಪೀಠಿಕೆ** : ಮಾನವನು ತನ್ನ ದೈನಂದಿನ ಚಟುವಟಿಕೆಗಳಲ್ಲಿ ಬಳಸಿ ಬಿಸಾಡುವ ನಿರುಪಯುಕ್ತ ವಸ್ತುಗಳೇ ತ್ಯಾಜ್ಯ ವಸ್ತುಗಳು. ಇವುಗಳಲ್ಲಿ ಮೂರು ವಿಧ. ಘನ ತ್ಯಾಜ್ಯವಸುಗ್ತಳು, ದ್ರವ ತ್ಯಾಜ್ಯ ವಸ್ತುಗಳು ಮತ್ತು ಅನಿಲತ್ಯಾಜ್ಯ ವಸುಗ್ತಳು. ಇವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದರೆ ಪರಿಸರ ನಾಶವಾಗುತ್ತದೆ.

**ವಿಷಯ ನಿರೂಪಣೆ** : ಇತ್ತೀಚಿನ ದಿನಗಳಲ್ಲಿ ತ್ಯಾಜ್ಯ ವಸ್ತುಗಳ ನಿರ್ವಹಣೆ ದೊಡ್ಡ ಸವಾಲಾಗಿ ಪರಿಣಮಿಸುತ್ತಿದ್ದು, ಪರಿಸರವೂ ಕಲುಷಿತಗೊಳುತ್ತಿದೆ. ಇವುಗಳನ್ನು ವೈಜ್ಞಾನಿಕವಾಗಿ ಸಮರ್ಪಕವಾಗಿ ಈ ಕೆಳಗಿನಂತೆ ನಿರ್ವಹಣೆ ಮಾಡಬೇಕಾಗಿದೆ.

- ಮೊದಲ ಹಂತದಲ್ಲಿ ಮನೆ, ಕಚೇರಿ ಹಾಗೂ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿರುವ ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಲು, ವೈಜಾನ್ನಿಕರೀತಿಯಲ್ಲಿ ವಿಂಗಡಿಸಲು ಸೂಕ್ತವಾದ ವ್ಯವಸ್ಥೆ ಮಾಡಿಕೊಳ್ಳಬೇಕು.
- ಮರು ಬಳಕೆಗೆ ಯೋಗ್ಯವಾದ ತ್ಯಾಜ್ಯವಸ್ತುಗಳನ್ನು ಸೂಕ್ತ ರೀತಿಯಲ್ಲಿ ಬಳಸಬೇಕು.
- ತ್ಯಾಜ್ಯವಸ್ತುಗಳಿಂದ ಸುಂದರ ಕಲಾಕೃತಿಗಳನ್ನು ತಯಾರಿಸುವುದು, ವಿದ್ಯುತ್ ಉತ್ಪಾದನೆ, ಸಾವಯವ ಗೊಬ್ಬರ ಮೊದಲಾದ ಉದೇಶಗಳಿಗೆ ಬಳಸುವುದು.
- ನದಿಗಳನ್ನು ದತ್ತು ತೆಗೆದುಕೊಂಡು ತ್ಯಾಜ್ಯವಸ್ತುಗಳು ನದಿಗೆ ಸೇರದಂತೆ ನಿಗವಹಿಸುವದು.
- ಜನರಿಗೆ ಅರಿವನ್ನು ಉಂಟು ಮಾಡುವ ಕಾರ್ಯಕ್ರಮವನ್ನು ಏರ್ಪಡಿಸಬೇಕು ಇತ್ಯಾದಿ.

**ಉಪಸಂಹಾರ** : ಕೈಗಾರಿಕೀಕರಣ, ನಗರೀಕರಣ, ಜಾಗತೀಕರಣದ ಅಬ್ಬರದಲ್ಲಿ ದಿನದಿಂದ ದಿನಕ್ಕೆ, ಕ್ಷಣದಿಂದ ಕ್ಷಣಕ್ಕೆ ತ್ಯಾಜ್ಯ ವಸ್ತುಗಳ ನಿರ್ವಹಣೆ ಒಂದು ಸಮಸ್ಯೆಯಾಗುತ್ತಿದ್ದು, ಅರಿವು – ಜಾಗೃತಿ ಮೂಡಿಸುವುದು ಇಂದಿನ ದಿನಗಳಲ್ಲಿ ಸರ್ಕಾರ, ಸಂಘ ಸಂಸ್ಥೆ, ಪ್ರತಿಯೊಬ್ಬರ ಮೊದಲ ಆದ್ಯತೆಯಾಗಬೇಕು.

**ಅಥವಾ**

**ರಾಷ್ಟ್ರೀಯ ಹಬ್ಬಗಳ ಮಹತ್ವ**

**ಪೀಠಿಕೆ:** ಒಂದು ದೇಶದ ಐಕ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹಬ್ಬಗಳು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಭಾರತದಂತಹ ವೈವಿಧ್ಯತೆಯುಳ್ಳ ರಾಷ್ಟ್ರಗಳಲ್ಲಿ ಏಕತೆಯನ್ನು ಸಾಧಿಸುವುದು ಇಂತಹ ರಾಷ್ಟ್ರೀಯ ಹಬ್ಬಗಳ ಮೂಲಕ ಸಾಧ್ಯವಿದೆ.

"ಇಡೀ ರಾಷ್ಟ್ರದ ಜನರೆಲ್ಲರೂ ಯಾವುದೇ ಭೇಧಭಾವವಿಲ್ಲದೆ, ಜಾತಿ, ಧರ್ಮ, ಪ್ರಾದೇಶಿಕ ಭಿನ್ನತೆಯನ್ನು ತೊರೆದು ಒಟ್ಟಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ನಮ್ಮದೇಶದಲ್ಲಿ ಮೂರು ರಾಷ್ಟ್ರೀಯ ಹಬ್ಬಗಳೆಂದು ಘೋಸಿಸಲಾಗಿದೆ. ಅವುಗಳೆಂದರೆ 1) ಸ್ವಾತಂತ್ರ್ಯ ದಿನಾಚರಣೆ 2) ಗಣರಾಜ್ಯೋತ್ಸವ 3) ಗಾಂಧಿ ಜಯಂತಿ.

**1) ಸ್ವಾತಂತ್ರ್ಯ ದಿನಾಚರಣೆ:** ಭಾರತ ಸುಮಾರು ಎರಡು ನೂರು ವರ್ಷಗಳ ಕಾಲ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತ್ತು. ವ್ಯಾಪಾರಕ್ಕಾಗಿ ಬಂದ ಬ್ರಿಟೀಷರು ಭಾರತೀಯ ರಾಜರ ದೌರ್ಬಲ್ಯಗಳನ್ನು ಉಪಯೋಗಿಸಿಕೊಂಡು ಭಾರತ ದೇಶದ ಆಡಳಿತ ಚುಕ್ಕಾಣಿ ಹಿಡಿದಿದ್ದರು. ಭಾರತಿಯರಿಗೆ ಸ್ವಾತಂತ್ರ ಎನ್ನವುದೇ ಇರಲಿಲ್ಲ. ಹಾಗಾಗಿ ಭಾರತೀಯರೆಲ್ಲರೂ ಒಟ್ಟಾಗಿ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ರಣಕಹಳೆಯನ್ನು ಊದಿ ಕೊನೆಗೆ **1947 ನೇ ಆಗಸ್ಟ್ 15** ರಂದು ಸ್ವಾತಂತ್ರ ವನ್ನು ಪಡೆದರು. ಆ ದಿನವನ್ನು ಪ್ರತಿವರ್ಷ ಭಾರತೀಯರೆಲ್ಲರೂ ಒಟ್ಟಾಗಿ ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಿ ರಾಷ್ಟ್ರೀಯ ಐಕ್ಯತೆಯನ್ನು ಮೆರೆಯುತ್ತಾರೆ.

**2) ಗಣರಾಜ್ಯೋತ್ಸವ :** ಭಾರತದೇಶವು ಸ್ವಾತಂತ್ರ್ಯವನ್ನು ಪಡೆದ ನಂತರ ಎಲ್ಲ ರಾಜ್ಯಗಳನ್ನು ಗಣಗಳನ್ನಾಗಿ ಮಾಡಿ (ಒಟ್ಟುಗೂಡಿಸಿ) ಉತ್ತಮವಾದ ಆಡಳಿತ ನಡೆಸಲು ಕಾನೂನುರೂಪ ಪಡೆದ ಸಂವಿಧಾನವನ್ನು **ಜನೇವರಿ 26,1950** ರಲ್ಲಿ ಜಾರಿಗೆ ತರಲಾಯಿತು. ಆ ದಿನವೇ ಗಣರಾಜ್ಯ ದಿನ. ಇದನ್ನು ಕೂಡ ನಮ್ಮ ದೇಶದ ಪ್ರಜೆಗಳೆಲ್ಲರೂ ಒಟ್ಟಾಗಿ ಸೇರಿ ಆಚರಿಸುತ್ತಾರೆ.ಈ ದಿನ ಸಂವಿಧಾನದ ನಿರ್ಮಾತೃಗಳು ಹಾಗೂ ತತ್ವಗಳನ್ನು ಸ್ಮರಿಸಿಕೊಳ್ಳುತ್ತಾರೆ. ಪ್ರತಿಯೊಬ್ಬರು ಸಂವಿಧಾನ ಪಾಲಿಸುವ ಮನೋಧರ್ಮವನ್ನು ಬೆಳೆಸಿಕೊಳ್ಳುವ ಆಶಯನ್ನು ಪಡೆಯುತ್ತಾರೆ. ಹಾಗೆಯೇ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

**3) ಗಾಂಧಿ ಜಯಂತಿ :** ಯಾವುದೇ ಒಂದು ದೇಶದ ಜನರೆಲ್ಲರೂ ಒಟ್ಟಾಗಿ ಸೇರಲು ನಾಯಕತ್ವ ಬೇಕು. ಅಂತೆಯೇ ನಮ್ಮ ದೇಶದ ಸ್ವಾತಂತ್ರ್ಯ ಪಡೆಯಲು ನಾಯಕತ್ವವಹಿಕೊಂಡವರು ನಮ್ಮ ದೇಶದ ರಾಷ್ಟ್ರಪಿತ ಎನಿಸಿಕೊಂಡ ಮಹಾತ್ಮ ಗಾಂಧೀಜಿಯವರು. ಅವರ ಹುಟ್ಟಿದ ದಿನವೇ **ಅಕ್ಟೋಬರ್ 2**. ಆ ದಿನವನ್ನು ಗಾಂಧಿಜಯಂತಿಯೆಂದು ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಲಾಗುತ್ತದೆ. ಏಕೆಂದರೆ ಗಾಂಧೀಜಿವರು ಸ್ವಾತಂತ್ರ್ಯ ಚಳುವಳಿಯ ಮುಂದಾಳತ್ವವನ್ನು ವಹಿಸಿಕೊಂಡು ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡರು. ಆದ್ದರಿಂದ ಅವರ ಆದರ್ಶಗಳನ್ನು ನೆನೆಯುತ್ತ, ಅವರನ್ನು ಸ್ಮರಿಸುತ್ತಾ ಸ್ವಾತಂತ್ರ್ಯದ ಮಹತ್ವದಬಗ್ಗೆ ಕೊಂಡಾಡುವ ದಿನವಾಗಿದೆ.

**ಉಪಸಂಹಾರ :**

ಭಾರತದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ಪ್ರತಿಯೊಬ್ಬ ನಾಗರಿಕರಲ್ಲಿ ಏಕತೆ. ದೇಶಭಕ್ತಿ, ಸಂವಿಧಾನದ ಮಹತ್ವ, ನಾಯಕತ್ವದ ಮಹತ್ವ ಮುಂತಾದ ವಿಚಾರಗಳನ್ನು ತಿಳಿಯಲು ಮತ್ತು ನಾವು ಅದೇ ರೀತಿ ನೆಡೆದುಕೊಳ್ಳಲು ನೆರವಾಗುತ್ತದೆ ಎಂಬ ಆಶಯವನ್ನು ಇಟ್ಟುಕೊಳ್ಳೋಣ.

****************

# ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

## ಕಲಾಸಿಪಾಳ್ಯ, ಬೆಂಗಳೂರು–02

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 100** ಮಾದರಿ ಪ್ರಶ್ನೆ ಪತ್ರಿಕೆ 2 **ಅವಧಿ : 3ಗಂ. 15ನಿಮಿಷಗಳು**

**ಉತ್ತರ ಸಹಿತ**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.** **6*1=6**

**1. 'ಸುಯ್ಯನೆ' ಈ ಅವ್ಯಯಕ್ಕೆ ಉದಾಹರಣೆ**

ಎ) ಸಾಮಾನ್ಯ ಬಿ) ಅನುಕರಣಾವ್ಯಯ ಸಿ) ಭಾವಸೂಚಕ ಡಿ) ಸಂಬಂಧಸೂಚಕ

**ಉತ್ತರ: ಬಿ) ಅನುಕರಣಾವ್ಯಯ**

**2. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು**

ಎ) ಸಾಮಾನ್ಯ ವಾಕ್ಯ ಬಿ) ಸಂಯೋಜಿತ ವಾಕ್ಯ ಸಿ) ಮಿಶ್ರವಾಕ್ಯ ಡಿ) ಸ್ವತಂತ್ರ ವಾಕ್ಯ

**ಉತ್ತರ: ಬಿ) ಸಂಯೋಜಿತ ವಾಕ್ಯ**

**3. ಮಾಡನು – ಪದವು ಕ್ರಿಯಾಪದದ ಈ ರೂಪ**

ಎ) ವಿಧ್ಯರ್ಥಕ ಬಿ) ಸಂಭವನಾರ್ಥಕ ಸಿ) ನಿಷೇದಾರ್ಥಕ ಡಿ) ಪ್ರಶ್ನಾರ್ಥಕ

**ಉತ್ತರ: ಸಿ) ನಿಷೇದಾರ್ಥಕ**

**4. ನೆನಪು – ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ**

ಎ) ಕೃನ್ನಾಮ ಬಿ) ಕೃದಂತ ಭಾವನಾಮ ಸಿ) ತದ್ದಿತಾಂತ ಭಾವನಾಮ ಡಿ) ಕೃದಂತಾವ್ಯಯ

**ಉತ್ತರ: ಬಿ) ಕೃದಂತ ಭಾವನಾಮ**

**5. ಒಂದು ಪದವನ್ನೋ, ವಾಕ್ಯವನ್ನೋ ಹೇಳಿ ಅದಕ್ಕೆ ಸಮನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಬಳಸುವ ಲೇಖನ ಚಿಹ್ನೆ**

ಎ) ಆವರಣ ಬಿ) ಉದ್ಧರಣ ಸಿ) ವಾಕ್ಯವೇಷ್ಟನ ಡಿ) ಅರ್ಧವಿರಾಮ

**ಉತ್ತರ: ಎ) ಆವರಣ**

**6. 'ಮನ್ವಂತರ' ಪದವು ಈ ಸಂಧಿಗೆ ಉದಾಹರಣೆ**

ಎ) ಸವರ್ಣದೀರ್ಘ ಬಿ) ಗುಣಸಂಧಿ ಸಿ) ವೃದ್ಧಿಸಂಧಿ ಡಿ) ಯಣ್‌ಸಂಧಿ

**ಉತ್ತರ: ಡಿ) ಯಣ್‌ಸಂಧಿ**

**II. ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಪದವನ್ನು ಬರೆಯಿರಿ.** **4*1=4**

7. ಇಸವಾಸ : ವಿಶ್ವಾಸ : ಇಲ್ಲದ್ಹಂಗ : ____________ **ಉತ್ತರ: ಇಲ್ಲದ ಹಾಗೆ**

8. ಒಳ್ಳೆಯ : ಗುಣವಾಚಕ : : ಇನಿತು : ____________ **ಉತ್ತರ: ಪರಿಮಾಣ ವಾಚಕ**

9. ಅನೃತ : ಸುಳ್ಳು : : ತಸ್ಕರ : ____________ **ಉತ್ತರ: ಕಳ್ಳ**

10. ಆ, ಈ, ಊ : ದೀರ್ಘಸ್ವರಗಳು : : ಅ, ಇ, ಉ, ಋ : ____________ **ಉತ್ತರ: ಹ್ರಸ್ವ ಸ್ವರಗಳು**

**III. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7*1=7**

**11. ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು?**

ಉತ್ತರ: ಮಹಮ್ಮದೀಯರ ಆಳ್ವಿಕೆಯ ಅವಧಿಯಲ್ಲಿ ಪರ್ಷಿಯನ್ ಭಾಷೆಯಿಂದ ಅನೇಕ ಶಬ್ದಗಳು ಕನ್ನಡಕ್ಕೆ ಬಂದಿವೆ.

**12. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?**

**ಉತ್ತರ :** ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ.

**13. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?**

**ಉತ್ತರ :** ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದನು.

**14. ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರೇನು?**

**ಉತ್ತರ:** ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರು ಅಗ್ನಿಭೂತಿ ವಾಯುಭೂತಿ.

**15. ಹಕ್ಕಿಯು ಯಾವುದರ ಸಂಕೇತವಾಗಿದೆ?**

**ಉತ್ತರ:** ಹಕ್ಕಿಯು ಕಾಲಪಕ್ಷಿಯ ಸಂಕೇತವಾಗಿದೆ.

**16. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?**

**ಉತ್ತರ :** ಕುದುರೆಯನ್ನು ಲವನು ತಾನು ತೊಟ್ಟಿದ್ದ ಉತ್ತರೀಯದಿಂದ ಕಟ್ಟಿದನು.

**17. ಭಗತ್‌ಸಿಂಗ್ ಯಾವುದನ್ನು ತನಗೆ ದೊರೆತ ಪಾರಿತೋಷಕವೆಂದು ತಿಳಿದಿದ್ದನು?**

**ಉತ್ತರ:** ಭಗತ್‌ಸಿಂಗ್ ರಕ್ತಸಿಕ್ತವಾಗಿದ್ದ ಮಣ್ಣನ್ನು ತನಗೆ ದೊರೆತ ಪಾರಿತೋಷಕವೆಂದು ತಿಳಿದಿದ್ದನು.

**IV. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10*2=20**

**18. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳೇನು?**

ಉತ್ತರ: ವ್ಯಾವಹಾರಿಕವೆಂದರೆ ಜೀವದ್ಭಾಷೆ, ಅದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ, ಕನ್ನಡ, ತಮಿಳು, ತೆಲುಗು, ತುಳು, ಮರಾಠಿ, ಉರ್ದು, ಇಂಗ್ಲಿಷ್ ಇದಕ್ಕೆ ಉದಾಹರಣೆ. ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಉಪಯೋಗವಾದ ಭಾಷೆ. ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಳಿ, ಇತ್ಯಾದಿ ಈ ವರ್ಗಕ್ಕೆ ಉದಾಹರಣೆ. ಎಲ್ಲ ವ್ಯಾವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕಿಲ್ಲ. ತುಳು ಒಂದು ಸುಂದರ ವ್ಯಾವಹಾರಿಕ ಭಾಷೆ. ಆದರೆ ಅದು ಗ್ರಾಂಥಿಕ ಭಾಷೆಯಲ್ಲ. ಹಾಗೆಯೇ ಎಲ್ಲ ಗ್ರಾಂಥಿಕ ಭಾಷೆಗಳು ಇಂದು ವ್ಯಾವಹಾರಿಕವಾಗಿ ಇರುವುದಿಲ್ಲ. ಸಂಸ್ಕೃತ ಗ್ರಾಂಥಿಕ ಭಾಷೆಯಾಗಿದ್ದು, ಯಾವೊಂದು ಪ್ರದೇಶದಲ್ಲಿಯೂ ಅದು ವ್ಯಾವಹಾರಿಕ ಭಾಷೆಯಾಗಿರುವುದಿಲ್ಲ

**19. ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?**

**ಉತ್ತರ:** ನೆಹರೂ ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ವಿಶ್ವೇಶ್ವರಯ್ಯರವರನ್ನು ಕುರಿತು "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ಹೇಳಿದ್ದಾರೆ.

**20. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನ್ಯಾಯ ವಿಧಾಯಕ ಸಭೆ ಹೇಗೆ ಕಾರ್ಯ ನಿರ್ವಹಿಸುತ್ತಿತ್ತು?**

**ಉತ್ತರ:** ನಾಲ್ವಡಿ ಕೃಷ್ಣರಾಜರು 1907ರಲ್ಲಿ ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿದರು. ಇದರಲ್ಲಿ ಜನರಿಂದ ಆಯ್ಕೆಯಾದವರು 22 ಸದಸ್ಯರು. ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಸಂಸ್ಥೆ, ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲಾ ವಿಷಯಗಳನ್ನು ವಿಮರ್ಶಿಸುವ ಅಧಿಕಾರ ಆ ಸಭೆಗೆ ಇದ್ದಿತು. ಮುಖ್ಯವಾಗಿ ಯಾವುದೇ ಕಾನೂನನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು. ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

**21. ಸೂರ್ಯಮಿತ್ರನು ಮಾವನೆಂದು ತಿಳಿದಾಗ ವಾಯುಭೂತಿಯ ಪ್ರತಿಕ್ರಿಯೆ ಹೇಗಿತ್ತು?**

**ಉತ್ತರ:** ಸೂರ್ಯಮಿತ್ರನು ಮಾವನೆಂದು ತಿಳಿದಾಗ ಕಿರಿಯವನಾದ ವಾಯುಭೂತಿ ತಮಗೆ ಸೂರ್ಯಮಿತ್ರನು ಮಾಡಿದುದೆಲ್ಲವೂ ಅಪಕಾರವೆಂದೇ ಬಗೆದನು. "ನಾವು ಭಿಕ್ಷೆ ಬೇಡಿ ತಂದ ಅನ್ನಕ್ಕೆ ಸೇರಿಸಲು ಎಣ್ಣೆಯನ್ನಾಗಲಿ, ಉಪ್ಪನ್ನಾಗಲಿ, ಮಜ್ಜಿಗೆಯನ್ನಾಗಲಿ ನಮಗೆ ಎಂದಿಗೂ ಕೊಡಲೂ ಇಲ್ಲ ಕೊಡಿಸಲೂ ಇಲ್ಲ. ಕೆರೆ ಹೋಗಿ ಸ್ನಾನ ಮಾಡುವ ಸಂದರ್ಭದಲ್ಲಿ ತಲೆಗೆ ಹಚ್ಚಲು ಎಣ್ಣೆಯನ್ನಾದರೂ ನೀಡಲಿಲ್ಲ. ತಾನಾದರೋ ದಿವ್ಯವಾದ ಆಹಾರಗಳನ್ನು ಪ್ರತಿದಿನವೂ ನೆಂಟರನ್ನು ಆಳುಗಳನ್ನು ಕೂಡಿಕೊಂಡು ಉಣ್ಣುತ್ತಿದ್ದನು. ಹಬ್ಬದ ದಿವಸದಲ್ಲಾದರೂ ಇವರಿಗೆ ಊಟ ಹಾಕಿ ಎಂದು ಹೇಳಲಿಲ್ಲ. ಇವನು ಪಂಚ ಮಹಾಪಾತಕ ಮಾಡಿದನು. ನಮ್ಮನ್ನು ಏಳೆಂಟು ವರ್ಷಗಳವರೆಗೆ ಶತ್ರುಗಳಂತೆ ದಂಡಿಸಿದನೆಂದು ವಾಯುಭೂತಿಯು ಕೋಪದಿಂದ ಮನದಲ್ಲಿ ಅಂದು ಕೊಂಡನು.

**22. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?**

**ಉತ್ತರ:** ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು, ಕಂಬನಿಯು ಹೆಚ್ಚಾಗಿ ಬಹಳವಾಗಿ ನೊಂದು ಕೊಳ್ಳುತ್ತಾ ಕರ್ಣನು ದುಃಖಿತನಾಗಿ ಮನಸ್ಸಿನಲ್ಲಿಯೇ "ಅಯ್ಯೋ, ದುರ್ಯೋಧನನಿಗೆ ಕೇಡಾಯಿತು" ಎಂದನು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟು ಹಾಕುವುದಲ್ಲದೆ; ಸುಮ್ಮನೆ ಹೋಗುವುದೇ?, ಕೃಷ್ಣನು" ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು" ಎಂದು ಮನದಲ್ಲಿ ನೊಂದು ಕೊಂಡನು.

**23. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?**

**ಉತ್ತರ:** ಕರ್ಣನು ಕೃಷ್ಣನನ್ನು ಕುರಿತು "ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಭಾರತ ಯುದ್ಧದಲ್ಲಿ ಮೃತ್ಯುದೇವತೆಗೆ ಔತಣ ಕೂಟ ಏರ್ಪಡಿಸುತ್ತೇನೆ. ನಾನು ಕೌರವನ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರ ಕೊಲ್ಲುತ್ತಾ, ಅಗತ್ಯ ಬಂದರೆ ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

**24. 'ವಸಂತ ಮುಖ ತೋರಲಿಲ್ಲ' ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**

**ಉತ್ತರ:** ಹಸಿರು ತುಂಬಿ ನಿಂತ ಮಾವಿನ ಮರಗಳು, ರೆಕ್ಕೆ ಬಿಚ್ಚಿ ಹಾರುತ್ತಿರುವ ಹಕ್ಕಿಗಳು, ಮನತುಂಬಿ ಹಾಡುವ ಕೋಗಿಲೆಗಳು ಕಡಲುಕ್ಕಿ ಹರಿಯುವಂತಹ ಸಂಭ್ರಮ ಈ ಕವನದಲ್ಲಿ ವ್ಯಕ್ತವಾಗಿದೆ.

**25. ಜ್ಞಾನಿ – ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವೇನು?**

ಉತ್ತರ: ಅರಿಯದವರೊಡನೆ ಸ್ನೇಹ ಮಾಡಿದರೆ ಕಲ್ಲನ್ನು ಹೊಡೆದು ಕಿಡಿಯ ಹೊತ್ತಿಸಿಕೊಂಡಂತೆ, ಬಲ್ಲವರೊಂದಿಗೆ ಸ್ನೇಹವ ಮಾಡಿದರೆ ಮೊಸರ ಕಡೆದು ಬೆಣ್ಣೆಯ ತೆಗೆದುಕೊಂಡಂತೆ, ಚೆನ್ನಮಲ್ಲಿಕಾರ್ಜುನ ದೇವ ನಿಮ್ಮ ಶರಣರ ಸ್ನೇಹವ ಮಾಡಿದರೆ ಕರ್ಪೂರದ ಗಿರಿಗೆ ಬೆಂಕಿ ತಗುಲಿದಂತೆ. ಯಾವುದಾದರು ವಸ್ತುವಿಗೆ ಬೆಂಕಿ ತಗುಲಿದರೆ ಅದು ಸುಟ್ಟು ಹೋಗಿ ಬೂದಿ ಉಳಿಯುತ್ತದೆ. ಆದರೆ ಕೊಂಬಂತೆ. ಆದರೆ ಕರ್ಪೂರದ ಗಿರಿಗೆ

ಬೆಂಕಿ ತಗುಲಿದರೆ ಯಾವ ಶೇಷವೂ ಉಳಿಯಲಾರದು. ಇದು ಭಕ್ತರು ಭಗವಂತನಲ್ಲಿ ಶರಣಾಗುವ ಭಾವವಾಗಿದೆ ಎಂದು ಅಕ್ಕಮಹಾದೇವಿಯು ಹೇಳಿದ್ದಾಳೆ.

**26. ಪೈಗಳ ತಮ್ಮನ ನೂಲು ಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?**

**ಉತ್ತರ:** ಪೈಗಳ ತಮ್ಮನ ನೂಲು ಮದುವೆಯ ದಿನ ಚಪ್ಪರದಲ್ಲಿ ಒಂದು ಕಡೆಯಲ್ಲಿ ಒಡ್ಡುಗೆಗಳನ್ನು ಕಟ್ಟುತ್ತಾರೆ. ಮತ್ತೊಂದು ಕಡೆ ಮಂಡಿಗೆಗಳನ್ನು ಮಡಚುತ್ತಾರೆ. ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಾರೆ. ಜೋಳದ ಗದ್ದೆಯಲ್ಲಿ ಗಿಳಿಗಳ ಕೋಲಾಹಲದಂತೆ ಚಪ್ಪರವೆಲ್ಲಾ ಗದ್ದಲ. ಆನಡುವೆ ಕುಗ್ಗಿದ ಕೊರಳಲ್ಲಿ ಹಾಡೊಂದು ಕೇಳಿಸಿತು.

**27. ಮೂರ್ಖರ ಪ್ರಕೃತಿ ಹೇಗಿರುತ್ತದೆ?**

ಉತ್ತರ: ಕುಲ ಎಷ್ಟು ಉನ್ನತವಾದರೇನು? ಎಷ್ಟು ಓದಿದರೇನು? ಮೂರ್ಖನ ದೌರ್ಜನ್ಯಕ್ಕೆ ಯಾವುದೂ ಮದ್ದಲ್ಲ. ಚಂದನದ ಕೊರಡಿಗೆ ಬಿದ್ದ ಬೆಂಕಿಯೂ ಸುಟ್ಟೇ ಸುಡುತ್ತದೆ. ನೀರು ಬಿದ್ದಾಗ ಬೆಂಕಿ ನಂದುವುದು ಸಹಜ. ಆದರೆ ವಡಲಾಗ್ನಿ ಕಡಲೊಳಗೆ ಭುಗಿಲೆನ್ನುತ್ತದೆ. ಈ ರೀತಿಯಾಗಿ ಮೂರ್ಖರ ಪ್ರಕೃತಿ ಇರುತ್ತದೆ.

**V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6**

**28. ಪು. ತಿ ನರಸಿಂಹಾಚಾರ್**

ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ (ಸಾ.ಶ. 1905)** ಇವರು **ಮಂಡ್ಯ ಜಿಲ್ಲೆಯ ಮೇಲುಕೋಟೆಯವರು.**

ಕನ್ನಡ ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು **ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ** ಇವರ ಪ್ರಮುಖ ಕೃತಿಗಳು.

ಹಂಸದಮಯಂತಿ ಮತ್ತು ಇತರ ರೂಪಕಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶ್ರೀಹರಿಚರಿತೆ ಕಾವ್ಯಕ್ಕೆ ಪಂಪಪ್ರಶಸ್ತಿ ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ.

**29. ಲಕ್ಷ್ಮೀಶ**

ಲಕ್ಷ್ಮೀಶ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರಿನವರು. ಇವರ ಕಾಲ 1550. ಇವರಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇವೆ.

**ಜೈಮಿನಿ ಭಾರತವೆಂಬ** ಪ್ರಸಿದ್ಧ ಕಾವ್ಯದ ಕರ್ತೃ. ಲಕ್ಷ್ಮೀಶ ಕವಿಗೆ **ಉಪಮಾಲೋಲ, ಕರ್ಣಾಟಕ ಚೂತವನ ಚೈತ್ರ** ಎಂಬ ಬಿರುದುಗಳಿವೆ.

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3**

30.

| 4 | 4 | 4 | |
|---|---|---|---|
| _ UU | _ U U | _ U U | |
| ಪುಟ್ಟಿದ | ನೂರ್ವರು | ಮೆನ್ನೊಡ | =12 |

| 4 | 4 | 4 | 4 | 4 | |
|---|---|---|---|---|---|
| _ UU | _ U U | U _U | _ U U | _ _ | |
| ವುಟ್ಟಿದ | ನೂರ್ವರು | ಮಿದಿರ್ಚಿ | ಸತ್ತೊಡೆ | ಕೋಪಂ | =20 |

**ಛಂದಸ್ಸಿನ ಹೆಸರು: ಕಂದ ಪದ್ಯ**

**VII. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿ ಬರೆಯಿರಿ. 1*3=3**

**31. ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ.**

**ಅಲಂಕಾರ** : ಉಪಮಾಲಂಕಾರ

**ಲಕ್ಷಣ:** ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ** : ಗುಂಡು ಸುರಿಯುವುದು

**ಉಪಮಾನ:** ಸಿಡಿಲು ಸಿಡಿಯುವುದು

**ಉಪಮಾ ವಾಚಕ** : ಹಾಂಗ

**ಸಮಾನಧರ್ಮ:** ಲುಪ್ತ (ಸಿಡಿಯುವುದು)

**ಸಮನ್ವಯ:** ಇಲ್ಲಿ ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದುದರಿಂದ ಇದು ಉಪಮಾಲಂಕಾರ.

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1*3=3**

**32. ಕೈ ಕೆಸರಾದರೆ ಬಾಯಿ ಮೊಸರು.**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸಾರುತ್ತದೆ. 'ಕೈ ಕೆಸರಾದರೆ ಬಾಯಿ ಮೊಸರು' ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ.

ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆಯು ಕಷ್ಟಪಟ್ಟು ದುಡಿದರೆ ಸುಖ ಎಂಬರ್ಥವನ್ನು ಕೊಡುತ್ತದೆ. ಕುಳಿತು ತಿಂದರೆ ಕುಡಿಕೆ ಹೊನ್ನು ಸಾಲದು ಎಂಬ ಮಾತಿದೆ. ಜೀವನೋಪಾಯಕ್ಕಾಗಿ ಯಾವುದಾದರೂ ಒಂದು ಕೆಲಸವಿರಬೇಕು. ಕಷ್ಟಪಟ್ಟು ದುಡಿದರೆ ಜೀವನ ಸುಖವಾಗಿರುತ್ತದೆ. **ಕರ್ಮಣ್ಯೇವಾಧಿಕಾಸ್ತೇ ಮಾ ಫಲೇಷು ಕದಾಚನ** ಎಂಬ ಗೀತೆಯ ಮಾತು ಇದನ್ನೇ ಹೇಳುವುದು.

**ಅಥವಾ**

**ಕೂಡಿಬಾಳಿದರೆ ಸ್ವರ್ಗ ಸುಖ.**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳಾಗಿದ್ದು, ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಸಾರುತ್ತದೆ. **ಕೂಡಿಬಾಳಿದರೆ ಸ್ವರ್ಗ ಸುಖ** ಎಂಬುದು ಪ್ರಸಿದ್ದ ಗಾದೆ ಮಾತಾಗಿದೆ.

'ವಸುದೈವ ಕುಟುಂಬಂ' ಎಂಬ ಮಾತನ್ನು ಈ ಗಾದೆಯು ತಿಳಿಸುತ್ತದೆ. ಮನುಷ್ಯ ಸಂಘಜೀವಿ ಹಾಗೂ ಸಮಾಜ ಜೀವಿ. ಸಮಾಜದ ಎಲ್ಲಾ ಜನರು ಒಟ್ಟಾಗಿ ಕೂಡಿ ಬಾಳಿದರೆ ಸ್ವರ್ಗ ಸುಖವನ್ನು ಅನುಭವಿಸಬಹುದು. ಸ್ವರ್ಗಸುಖ ಬೇರೆಲ್ಲೂ ಇಲ್ಲ ಬದುಕುವ ರೀತಿಯಲ್ಲಿದೆ. ಅವಿಭಕ್ತ ಕುಟುಂಗಳು ಈ ಗಾದೆಗೆ ಉತ್ತಮ ಉದಾಹರಣೆ. ಕುಟುಂಬದಿಂದ ಪ್ರಾರಂಭವಾಗಿ ಸಮಾಜ, ರಾಜ್ಯ, ದೇಶದಲ್ಲಿ ನಾವೆಲ್ಲರೂ ಭೇದಭಾವಗಳಿಲ್ಲದೆ ಪ್ರೀತಿ, ಸ್ನೇಹ ಸಾಮರಸ್ಯದಿಂದ ಒಟ್ಟಾಗಿ ಬಾಳುವುದಾಗಿದೆ. ಪರಸ್ಪರ ದ್ವೇಷ, ಅಸೂಯೆ, ಹೊಡೆದಾಟ ಬಡಿದಾಟಗಳೇ ಆದರೆ ಅಶಾಚಿತಿ, ಅಸಮಾಧಾನಗಳು ತಲೆದೋರಿ ಬದುಕು ನರಕವಾಗುತ್ತದೆ. ಕೂಡಿ ಬಾಳಿದರೆ ಸ್ವರ್ಗ ಸುಖ ಲಭಿಸುತ್ತದೆ. ಆನರ ನಡೆನ್ಮಡಿಗಳೇ ಅವರ ಸುಖದುಃಖಗಳಿಗೆ ಕಾರಣ. ಸುಖಸಂತೋಷ ಹೊಂದಬೇಕಾದರೆ ಕೂಡಿ ಬಾಳಬೇಕು.

**IX. ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6*3=18**

**33. "ನಾನು ಮುಖ ಮೇಲಾಗಿ ಬಿದ್ದಿದ್ದೆನೆ?"**

**ಆಯ್ಕೆ:** ಈ ವಾಕ್ಯವನ್ನು ಎ. ಎನ್. ಮೂರ್ತಿರಾವ್ ಅವರ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಸಂಕಲನದಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ಶಾನುಭೋಗರು ಗಾಡಿಯವರಿಗೆ ಕೇಳಿದರು. ಶಾನುಭೋಗರು ಪ್ರಜ್ಞೆತಪ್ಪಿ ಬಿದ್ದಿದ್ದಾಗ ಅದೇ ದಾರಿಯಲ್ಲಿ ಗಾಡಿಯಲ್ಲಿ ಹೋಗುತ್ತಿದ್ದ ರೈತರು ಅವರ ಮುಖದ ಮೇಲೆ ನೀರೆರೆಚಿ ಎಚ್ಚರಿಸಿದ ಸಂದರ್ಭದಲ್ಲಿ ಅವರ ಮನಸ್ಸನ್ನೆಲ್ಲಾ ವಿಸ್ಮಯ ಆವರಿಸಿತ್ತು. ತಾವು ಉಳಿದದ್ದು ಹೇಗೆ? ನಿಸ್ಸಹಾಯರಾಗಿ ಪ್ರಜ್ಞೆಯಿಲ್ಲದೆ ಬಿದ್ದಿದ್ದಾಗ ಹುಲಿ ತಮ್ಮನ್ನು ಎಳೆದುಕೊಂಡು ಹೋಗಲಿಲ್ಲವೇಕೆ? ಎಂದು ಸ್ವಲ್ಪ ಹೊತ್ತು ಯೋಚಿಸಿ ಗಾಡಿಯವರನ್ನು "ನಾನು ಮುಖ ಮೇಲಾಗಿ ಬಿದ್ದಿದ್ದೆನೆ?" ಎಂದು ಕೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ :** ಹುಲಿಯು ಕೊನೆಯವರೆಗೂ ತನ್ನ ಕುಲಧರ್ಮವನ್ನು ಪಾಲಿಸಿತು ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿ ಬಂದಿದೆ.

**34. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"**

**ಆಯ್ಕೆ:** ಈ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಎಂಬ ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದುಕೊಂಡಿರಲಿಲ್ಲ. ಪ್ರತಿ ವಚನಕಾರರಿಗೂ ಅವರವರದೇ ಆದ ಇಷ್ಟದೈವ ಇದ್ದಿತು. ಅದೇ ಪ್ರಜ್ಞೆ, ಅಂದರೆ "ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು." ಅವರು ತಮ್ಮ ಕಷ್ಟ ಸುಖ, ದುಃಖ ದುಮ್ಮಾನ, ಏಳುಬೀಳುಗಳನ್ನು, ಅವರ ಉತ್ಕಟ ಇಕ್ಕಟ್ಟುಗಳನ್ನು ಆ ಪ್ರಜ್ಞೆ ಮುಂದೆ ಹೇಳಿಕೊಳ್ಳುತ್ತ ಒದ್ದಾಡುತ್ತಿದ್ದರೆಂದು ಕಾಣುತ್ತದೆ ಎಂದು ಪ್ರಜ್ಞೆಯ ಬಗ್ಗೆ ವಿವರಿಸುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ವಚನಕಾರರಿಗೆ ಇಷ್ಟದೈವದ ರೀತಿಯಲ್ಲಿ ಇದ್ದ ಪ್ರಜ್ಞೆಯಂತೆ ಪ್ರತಿಯೊಬ್ಬರಲ್ಲಿ ಪ್ರಜ್ಞೆ ಜಾಗೃತವಾಗಿರಬೇಕು ಎಂಬುದನ್ನು ಸ್ವಾರಸ್ಯ ಪೂರ್ಣವಾಗಿ ವಿವರಿಸಿದ್ದಾರೆ.

**35. "ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ"**

**ಆಯ್ಕೆ:** ಈ ವಾಕ್ಯವನ್ನು ವಿ.ಕೃ.ಗೋಕಾಕ್ ಅವರು ರಚಿಸಿರುವ 'ಸಮುದ್ರದಾಚೆಯಿಂದ' ಎಂಬ ಪ್ರವಾಸಕಥನದಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ವಿ.ಕೃ ಗೋಕಾಕ್ ಅವರು ಲಂಡನ್ ನಗರದ ಪ್ರವಾಸವನ್ನು ಮುಗಿಸಿದ ಮೇಲೆ ನನ್ನ ದೃಷ್ಟಿಯು ಎಷ್ಟು ವಿಶಾಲವಾಗಿದೆ. ನನ್ನ ಸಂಸ್ಕೃತಿಯು ಎಂತಹ ಒರೆಗಲ್ಲಿನ ಮೇಲೆ ನಿಂತಿದೆ. ಇದನ್ನೆಲ್ಲ ನೆನೆಸಿಕೊಂಡಾಗ "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ" ಎಂದು ಬೇಕನ್ನನು

ಹೇಳಿದ ಮಾತು ನೆನಪಾಗುತ್ತದೆ. 'ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ' ಎಂಬ ಷೇಕ್ಸ್‌ಪಿಯರನ ನುಡಿಯು ಮನಸ್ಸಿನಲ್ಲಿ ಮೂಡಿದ ಸಂದರ್ಭವಾಗಿದೆ.

**ಸ್ವಾರಸ್ಯ:** ನಮ್ಮಜ್ಞಾನ, ದೃಷ್ಟಿಕೋನಗಳು ವಿಶಾಲವಾಗಬೇಕಾದರೆ ನಾಲ್ಕು ಕಡೆ ಪ್ರವಾಸವನ್ನು ಮಾಡಬೇಕು. ಆಗ ನಮ್ಮ ಆಲೋಚನೆಗಳು ವಿಶಾಲವಾಗುತ್ತವೆ. ಈ ಕೆಲಸವನ್ನು ಪ್ರವಾಸ ಮಾಡುತ್ತದೆ ಎಂಬುದು ಸ್ವಾರಸ್ಯಕರವಾಗಿದೆ.

**36. "ಹೊಸ ಎಚ್ಚರದೊಳು ಬದುಕೋಣ."**

**ಆಯ್ಕೆ:** ಈ ವಾಕ್ಯವನ್ನು ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ 'ಎದೆ ತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** "ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು" ಎಂದು ಕವಿಗಳು ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**ಸ್ವಾರಸ್ಯ:** ಕವಿ "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂಬ ಮಾತು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**37. "ಸಾರ್ವಭೌಮರಾ ನೆತ್ತಿಯ ಕುಕ್ಕಿ"**

**ಆಯ್ಕೆ:** ಈ ವಾಕ್ಯವನ್ನು ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ದ. ರಾ. ಬೇಂದ್ರೆ ಅವರು ರಚಿಸಿರುವ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಕವಿ ದ. ರಾ. ಬೇಂದ್ರೆ ಅವರು ಕಾಲದಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂಬ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:** ಕಾಲದ ಗತಿಯಲ್ಲಿ ವೈಭವದಿಂದ, ಅಹಂಕಾರದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಮಾವಶೇಷವಾಗಿದ್ದಾರೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**38. "ಸಮರದೊಳೆನಗಜ್ಜ ಪೇೞಿಮಾವುದು ಕಜ್ಜಂ."**

**ಆಯ್ಕೆ :** ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸ ಭೀಮ ವಿಜಯ' ಎಂಬ ಕೃತಿಯಿಂದ ಆರಿಸಲಾಗಿರುವ 'ಛಲಮನೆ ಮೆಱೆವೆಂ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಭೀಷ್ಮಾಚಾರ್ಯರು ನೀನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ ಒಪ್ಪಂದ ಮಾಡಿ ಮೊದಲಿದ್ದಂತೆ ನಡೆಯುವ ಹಾಗೆ ಮಾಡುವೆನು. ಈಗಲೂ ಕೂಡ ಅವರು ನಮ್ಮ ಮಾತನ್ನು ಮೀರದೆ ಪಾಲಿಸುತ್ತಾರೆ. ನೀನೂ ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊಳ್ಳಬೇಕು ಎಂದು ಭೀಷ್ಮರು ಹೇಳಿದಾಗ ದುರ್ಯೋಧನನು ಮುಗುಳು ನಗೆ ನಕ್ಕು "ಅಜ್ಜಾ, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದೆನೆ?" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ಈ ಮಾತಿನಲ್ಲಿ 'ಸಂಧಿ ಮಾಡಿಕೊಳ್ಳುವ ಮಾತೊಂದನ್ನು ಬಿಟ್ಟು ಯುದ್ಧದಲ್ಲಿ ನಾನೇನು ಮಾಡಬಹುದೆಂಬುದನ್ನು ಹೇಳಿ' ಎಂಬ ದುರ್ಯೋಧನನ ದಿಟ್ಟತನ ಇಲ್ಲಿ ವ್ಯಕ್ತವಾಗಿದೆ.

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*4=4**

**39.** **ಹಸುರಾಗಸ;** ಹಸುರು ಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
ಹಸುರು ಸಂಜೆಯೀ **ಬಿಸಿಲೂ!**

**ಅಥವಾ**

**ಹೊಸ** ಹೂವಿನ ಕಂಪು ಹಸುರು,
ಎಲರಿನ ತಂಪೂ ಹಸುರು!
ಹಕ್ಕಿಯ ಕೊರಲಿಂಪು ಹಸುರು!
ಹಸುರು **ಹಸುರಿಳೆಯುಸಿರೂ!**

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1*4=4**

40. **ಬೆನ್ನಬೆನ್ನತ್ತಿ ತಿರಿತಿರ್ವಿ ಕಡಿದರೊ ಏನು ಉಳಿಯದ್ದಂಗ**
**ನಡುವೆ ಹಾಕ್ಕೊಂಡು ಹೊಡದರೊ ಗುಂಡ ಕರುಣ ಇಲ್ಲದ್ದಂಗ**
**ಚಟಕಾರರು ಚೌಕಿ ಮಾಡುತ, ನಡಿದರೊ ಹೇಳದೆ ಗುಡದಾಗ**
**ಅಗಸಿಗೆ ಬಂದು 'ಹೆಬಲಕ' ಸಾಬ ಹೇಳತಾನ ಬುದ್ಧಿಮಾತ**
**ಕೊಡುತಿವಿ ಕಬುಲ ಕೇಳರಿ ಮಾತ, ಹೋಗಬ್ಯಾಡರಿ ಸತ್ತ**
**ಅನುವ ಮಾತಿಗೆ ನಂಬಿಗೆ ಸಾಲದೆ 'ಹನುಮ' ಬಂದನೊ ಮುಂದಿತ್ತ ॥**

**ಆಯ್ಕೆ :** ಈ ಪದ್ಯಭಾಗವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಲಾವಣಿಯಿಂದ ಆರಿಸಲಾಗಿದೆ.

**ಮೌಲ್ಯ:** ಇಲ್ಲಿ ಬ್ರಿಟಿಷರ ದೌರ್ಜನ್ಯ ಮತ್ತು ಹಲಗಲಿಯ ಬೇಡರ ಪ್ರತಿರೋಧ ವ್ಯಕ್ತವಾಗಿದೆ.

ಅಲ್ಲಿಗೆ ಬಂದ ದಂಡು ಬೇಡರನ್ನು ಹಿಂದೆ ಹಿಂದೆ ಹೋಗಿ ತಿರುತಿರುವಿ ಹಾಕಿ ಏನು ಉಳಿಯದ ಹಾಗೆ ಕಡಿದು ಹಾಕಿದರು. ಬೇಡರನ್ನು ಮಧ್ಯಕ್ಕೆ ಹಾಕಿಕೊಂಡು ಕರುಣೆ ಇಲ್ಲದ ಹಾಗೆ ಗುಂಡನ್ನು ಹೊಡೆದರು. ಚಟಿಕಾರರು (ಆಂಗ್ಲೋ ಇಂಡಿಯನ್ಸ್) ಬೇಡರನ್ನು ಕಾವಲು ಕಾಯುತ್ತ ಇರುವಾಗ ಬೇಡರು ಗುಡ್ಡದ ಕಡೆ ಹೋದರು. ಆಗ ಸಾಹೇಬ ಊರಿನ ಹೆಬ್ಬಾಗಿಲಿಗೆ ಬಂದು ಬುದ್ಧಿ ಮಾತನ್ನು ಹೇಳುತ್ತಾನೆ, ಶರಣಾಗಿ, ಸತ್ತು ಹೋಗ ಬೇಡಿರಿ ಎನ್ನುವ ಮಾತಿನ ಮೇಲೆ ನಂಬಿಕೆಯಿಲ್ಲದೆ ಹನುಮ ಮುಂದೆ ಬಂದು ನಿಂತನು.

**XII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **2*4=8**

**41 ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು?**

**ಉತ್ತರ:** ರಾಹಿಲನು ಮುದುಕಿಗೆ ನಿಮ್ಮ ಮಗ ಈಗ ಎಲ್ಲಿದ್ದಾನೆಂದು ಕೇಳಿದಾಗ, ಮುದುಕಿಯು "ನನ್ನ ಮಗ ಯುದ್ಧಕ್ಕೆ ಹೋಗಿದ್ದಾನೆ ! ನನ್ನ ಮಗ ಇನ್ನೂ ಚಿಕ್ಕ ಹುಡುಗನಾಗಿದ್ದಾಗ ಅವನ ತಂದೆಯನ್ನು ಯುದ್ಧಕ್ಕೆ ಕರೆದುಕೊಂಡು ಹೋಗಿದ್ದರು. ಆದರೆ ಹಿಂತಿರುಗಲಿಲ್ಲ. ಎದೆ ತುಂಬ ಬೂದಿ ಮುಚ್ಚಿದ ಕೆಂಡ, ಎದೆಯ ಗಾಯ ಇಂದಿಗೂ ಇದೆ, ನೋಡು. ಎಲ್ಲ ದುಃಖ ನುಂಗಿಕೊಂಡು ಮಗನನ್ನು ಸಾಕಿ ಸಲಹಿದೆ. ಮದುವೆಯನ್ನೂ ಮಾಡಿದೆ. ಈಗ ಐದಾರು ವರ್ಷಗಳ ಬಳಿಕ ಸೊಸೆ ಗರ್ಭಿಣಿಯಾದಳು. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು. ಅಷ್ಟರಲ್ಲಿ ಬಂತು ಯುದ್ಧ! ಅವನೊಮ್ಮೆ ಹಿಂತಿರುಗಿ ಬಂದಿದ್ದರೆ ಸಾಕಾಗಿತ್ತು. ಈ ವಿಷಯ ತಿಳಿದು ಅವನೆಷ್ಟು ಸಂಕಟ ಪಡುತ್ತಾನೋ..." ಎಂದು ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ವಿವರಿಸಿದಳು.

**ಅಥವಾ**

**ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.**

**ಉತ್ತರ:** ಯುದ್ಧದಲ್ಲಿ ಗಾಯಗೊಂಡ ರಾಹಿಲನು ಮುದುಕಿಯ ಮನೆಗೆ ಬರುತ್ತಾನೆ. ಆ ಸಂದರ್ಭದಲ್ಲಿ ಮುದುಕಿಯ ಸೊಸೆ ಹೆರಿಗೆ ಬೇನೆ ತಿನ್ನುತ್ತಿದ್ದಳು. ಇದನ್ನು ತಿಳಿದ ರಾಹಿಲ "ಅಮ್ಮ ನಾನೋರ್ವ ಡಾಕ್ಟರ್ ಆಕೆಯನ್ನು ಪರೀಕ್ಷಿಸಲೇ" ಎಂದು ಕೇಳಿದಾಗ ಮುದುಕಿಗೆ ಸಂತೋಷವಾಯಿತು. ನಂತರ ಮುದುಕಿ ರಾಹಿಲನ ಒದ್ದೆ ಬಟ್ಟೆಗಳನ್ನು ನೋಡಿ ತನ್ನ ಮಗನ ಬಟ್ಟೆಗಳನ್ನು ತಂದುಕೊಟ್ಟಳು. ರಾಹಿಲ ಒದ್ದೆಯಾಗಿದ್ದ ಬಟ್ಟೆ ಬದಲಿಸಿಕೊಂಡು ಮುದುಕಿಯ ಸೊಸೆಯನ್ನು ಪರೀಕ್ಷೆ ಮಾಡತೊಡಗಿದನು. ಬಹಳ ಹೊತ್ತಿನ ಪ್ರಯತ್ನದ ಬಳಿಕ ಮಗುವನ್ನು ಹೊರತೆಗೆದು ಸೊಸೆಯ ಜೀವ ಉಳಿಸಿದನು. ಆದರೆ ಮಗು ನಿರ್ಜೀವವಾಗಿತ್ತು. ನಂತರ ಮುದುಕಿಯು ಒಂದೆರಡು ಪುಟ್ಟ ಹಲಗೆ ತುಂಡುಗಳನ್ನು ಕೊಟ್ಟಳು. ಅವುಗಳಿಂದ ನೋವಾಗಿದ್ದ ಕಾಲುಗಳ ಆರೈಕೆ ಮಾಡಿಕೊಂಡನು. ಇದೇ ಸಮಯಕ್ಕೆ ಶತ್ರು ದೇಶದ ಸೈನಿಕರು ರಾಹಿಲನನ್ನು ಹುಡುಕಿಕೊಂಡು ಬಂದರು. ಆಗ ಮುದುಕಿಯು ರಾಹಿಲನ ಅಸಹಾಯಕತೆಯ ದಯನೀಯವಾದ ನೋಟವನ್ನು ನೋಡಿ ಯುದ್ಧಕ್ಕೆ ಹೋದ ತನ್ನ ಮಗನಂತೆ ಭಾವಿಸಿಕೊಂಡು ಸೊಸೆ ಮಲಗಿರುವ ಕೋಣೆಯ ಮಂಚದಡಿ ಕಳುಹಿಸಿ ಅವರಿಂದ ರಕ್ಷಿಸಿದಳು. ಶತ್ರು ಸೈನಿಕರು ಹೋದ ಮೇಲೆ ರಾಹಿಲನು ರಾತ್ರಿ ಒಂದು ಕೋಣೆಯಲ್ಲಿ ಮಲಗುವಂತೆ ಏರ್ಪಾಟು ಮಾಡಿದಳು. ಒಂದೆರಡು ದಿನಗಳಲ್ಲಿ ಪರಸರ್ಪರಲ್ಲಿ ವಿಶ್ವಾಸ ಮೂಡಿತು. ಇಬ್ಬರೂ ಪರಸ್ಪರ ಸುಖ-ದುಃಖಗಳನ್ನು ಹಂಚಿಕೊಂಡರು. ಹೀಗೆ ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಪರಸ್ಪರ ಸಹಾಯವನ್ನು ಮಾಡಿದರು.

**42. ದ್ರುಪದನಿಗೂ ದ್ರೋಣನಿಗೂ ನೆಡದ ಸಂಭಾಷಣಾ ಸ್ವಾರಸ್ಯವನ್ನು ಸಂಕ್ಷಿಪ್ತವಾಗಿ ಬರೆಯಿರಿ.**

**ಉತ್ತರ:** ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಕೇಳಿ, ದ್ರೋಣನು ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಿನಲ್ಲಿ ನಿಂತು, ದ್ವಾರಪಾಲಕನನ್ನು ಕರೆದು "ನಿಮ್ಮ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಯಪಡಿಸು" ಎಂದು ಹೇಳಲು ಆ ದ್ವಾರಪಾಲಕನು ಆ ರೀತಿಯಲ್ಲಿಯೇ ಬಂದು ರಾಜನಿಗೆ ತಿಳಿಸಿದನು. ಅವನು ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು. ಅವನನ್ನು ಹೊರಗೆ ನೂಕು" ಎಂದು ಸಭಾಮಧ್ಯದಲ್ಲಿ ಕೆಟ್ಟದಾಗಿ ಮಾತನಾಡಿದನು. ಆಗ ದ್ರೋಣನು ಒತ್ತಂಬರದಿಂದ ಅರಮನೆ ಪ್ರವೇಶಿಸಿ ದ್ರುಪದನನ್ನು ಕುರಿತು "ಅಣ್ಣಾ, ನೀವೂ ನಾವೂ ಜೊತೆಯಲ್ಲಿ ಓದಿದಿವೆಂಬುದನ್ನು ತಿಳಿದಿಲ್ಲವೇ?" ಎಂದಾಗ ದ್ರುಪದನು "ನಿನ್ನನ್ನು ನಾನು ತಿಳಿಯೆನು. ಎನ್ನನ್ನು ನೀನು ಅದೆಲ್ಲಿ ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣ ವಂಶದವನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲವರಾಗುತ್ತಾರೆಯೇ?" ಎಂಬ ಮಾತುಗಳಿಂದ ದ್ರೋಣನಿಗೆ ದ್ರುಪದ ನಾಚಿಕೆಗೆ ಈಡಾಗುವಂತೆ ಮಾಡಿದನು.

ಆಗ ದ್ರೋಣನು "ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು; ಮುಖದಲ್ಲಿ. ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುವು; ಬಾಂಧವ್ಯವನ್ನು ಮರೆಯುವಂತೆ ಮಾಡುವುದು; ಆದುದರಿಂದ ಸಂದೇಹ ಪಡದೆ ಸಷ್ಟವಾಗಿ ಐಶ್ವರ್ಯವು(ಲಕ್ಷ್ಮಿಯು) ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ಈಗ ತಿಳಿದೆನು" ಎಂದು ಹೇಳಿದನು. ಮುಂದುವರೆದು ದ್ರೋಣನು ದ್ರುಪದನನ್ನು ಕುರಿತು "ಎಲೈ ದುಷ್ಟನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದಿವು ಎಂಬ ಉತ್ಸಾಹಕ್ಕೆ ನಿನ್ನನ್ನು ಎನಗೆ ಕೊಲ್ಲಲಾಗದು. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ಸುಮ್ಮನೆ ಮೀಸೆ ಹೊತ್ತಿರುವುನೇ ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

**ಅಥವಾ**

**ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ?**

**ಉತ್ತರ:** ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಕೇಳಿ, ದ್ರೋಣನು ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಿನಲ್ಲಿ ನಿಂತು, ದ್ವಾರಪಾಲಕನನ್ನು ಕರೆದು "ನಿಮ್ಮ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಯಪಡಿಸು" ಎಂದು ಹೇಳಲು ಆ ದ್ವಾರಪಾಲಕನು ಆ ರೀತಿಯಲ್ಲಿಯೇ ಬಂದು ರಾಜನಿಗೆ ತಿಳಿಸಿದನು. ಅವನು ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು. ಅವನನ್ನು ಹೊರಗೆ ನೂಕು" ಎಂದು ಸಭಾಮಧ್ಯದಲ್ಲಿ ಕೆಟ್ಟದಾಗಿ ಮಾತನಾಡಿದನು. ಆಗ ದ್ರೋಣನು ಒತ್ತಂಬರದಿಂದ ಅರಮನೆ ಪ್ರವೇಶಿಸಿ ದ್ರುಪದನನ್ನು ಕುರಿತು "ಅಣ್ಣಾ, ನೀವೂ ನಾವೂ ಜೊತೆಯಲ್ಲಿ ಓದಿದಿವೆಂಬುದನ್ನು ತಿಳಿದಿಲ್ಲವೇ?" ಎಂದಾಗ ದ್ರುಪದನು "ನಿನ್ನನ್ನು ನಾನು ತಿಳಿಯೆನು. ಎನ್ನನ್ನು ನೀನು ಅದೆಲ್ಲಿ ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣ ವಂಶದವನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲವರಾಗುತ್ತಾರೆಯೇ?" ಎಂಬ ಮಾತುಗಳಿಂದ ದ್ರೋಣನಿಗೆ ದ್ರುಪದನು ಮರ್ಮಾಘಾತವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು.

ಆಗ ದ್ರೋಣನು "ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು; ಮುಖದಲ್ಲಿ ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುವು; ಭಾಂಧವ್ಯವನ್ನು ಮರೆಯುವಂತೆ ಮಾಡುವುದು; ಆದುದರಿಂದ ಸಂದೇಹ ಪಡದೆ ಸಷ್ಪವಾಗಿ ಐಶ್ವರ್ಯವು (ಲಕ್ಷ್ಮಿಯು) ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ಈಗ ತಿಳಿದೆನು" ಎಂದು ಹೇಳಿದನು. ಮುಂದವರೆದು ದ್ರೋಣನು ದ್ರುಪದನನ್ನು ಕುರಿತು "ಎಲೈ ದುಷ್ಟನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದಿವು ಎಂಬ ಉತ್ಸಾಹಕ್ಕೆ ನಿನ್ನನ್ನು ಎನಗೆ ಕೊಲ್ಲಲಾಗದು. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ಸುಮ್ಮನೆ ಮೀಸೆ ಹೊತ್ತಿರುವುನೇ (ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ?)" ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

**XIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **4 = (2+2)**

**43.** ಸಿ.ವಿ. ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣ ಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು. ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಡು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದೇನೆಂದರೆ ಬೆನ್ನು ತಟ್ಟಿ, ಅವನನ್ನು ಎಲ್ಲರ ಎದುರಿಗೆ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿ ಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

**ಪ್ರಶ್ನೆಗಳು:**

**1. ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವನೆ ಏನಾಗಿತ್ತು?**

**ಉತ್ತರ:** ಸಿ.ವಿ. ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣ ಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು. ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು.

**2. ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.**

**ಉತ್ತರ:** ಸಿ. ವಿ ರಾಮನ್ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಡು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದೇನೆಂದರೆ ಬೆನ್ನು ತಟ್ಟಿ, ಅವನನ್ನು ಎಲ್ಲರ ಎದುರಿಗೆ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿ ಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನಾಧರಿಸಿ ಪತ್ರ ಬರೆಯಿರಿ.** **1*5=5**

44. **ನಿಮ್ಮನ್ನು ಗೌರಿಬಿದನೂರು ತಾಲ್ಲೂಕು, ವಿಧುರಾಶ್ವತ್ಥ ಸರ್ಕಾರಿ ಪ್ರೌಢಶಾಲೆಯ ಜ್ಯೋತಿ ಎಂದು ಭಾವಿಸಿಕೊಂಡು, ಶಾಲೆಗೆ ಶುದ್ಧ ಕುಡಿಯುವ ನೀರಿನ ಘಟಕದ ವ್ಯವಸ್ಥೆ ಮಾಡುವಂತೆ ವಿಧುರಾಶ್ವತ್ಥ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೊಂದು ಮನವಿ ಪತ್ರವನ್ನು ಬರೆಯಿರಿ.**

**ದಿನಾಂಕ:--/--/--**

**ಇಂದ,**
ಜ್ಯೋತಿ,
10ನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
ವಿಧುರಾಶ್ವತ್ಥ,
ಗೌರಿಬಿದನೂರು ತಾಲ್ಲೂಕು.

**ಇವರಿಗೆ,**
ಅಧ್ಯಕ್ಷರು,
ಗ್ರಾಮ ಪಂಚಾಯಿತಿ,
ವಿಧುರಾಶ್ವತ್ಥ.

**ಮಾನ್ಯರೇ,**

**ವಿಷಯ : ಶುದ್ಧ ಕುಡಿಯುವ ನೀರಿನ ಘಟಕದ ವ್ಯವಸ್ಥೆ ಮಾಡಿ ಕೊಡುವ ಬಗ್ಗೆ.**

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ಸುಮಾರು 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಶುದ್ಧ ಕುಡಿಯುವ ನೀರಿನ ಅಭಾವದಿಂದ ವಿದ್ಯಾರ್ಥಿಗಳು ಪದೇ ಪದೇ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಆದಕಾರಣ ಶುದ್ಧ ಕುಡಿಯುವ ನೀರಿನ ಘಟಕದ ವ್ಯವಸ್ಥೆ ಮಾಡಿಕೊಡಬೇಕಾಗಿ ಶಾಲೆಯ ಶಿಕ್ಷಕರು ಹಾಗೂ ಎಲ್ಲಾ ವಿದ್ಯಾರ್ಥಿಗಳ ಪರವಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ವಂದನೆಗಳೊಂದಿಗೆ,**

**ಇಂತಿ ತಮ್ಮ ವಿಶ್ವಾಸಿ**
ಜ್ಯೋತಿ

**ಅಥವಾ**

**ನಿಮ್ಮನ್ನು ಮಲೆಮಹದೇಶ್ವರ ಬೆಟ್ಟದ ವಸತಿ ಶಾಲೆಯ ವಿದ್ಯಾರ್ಥಿ ನಿಖಿತಾ ಎಂದು ಭಾವಿಸಿಕೊಂಡು, ಕೊಳ್ಳೆಗಾಲದ ಹನೂರಿನಲ್ಲಿ ವಾಸವಾಗಿರುವ ನಿಮ್ಮ ತಾಯಿ ನಾಗಮ್ಮನವರಿಗೆ ಪೋಷಕರ ಸಭೆಗೆ ಹಾಜರಾಗುವಂತೆ ಕೋರಿ ಒಂದು ಪತ್ರ ಬರೆಯಿರಿ.**

**ಇಂದ**
ನಿಖಿತಾ
10ನೇ ತರಗತಿ
ವಸತಿ ಶಾಲೆ,
ಮಲೆಮಹದೇಶ್ವರ ಬೆಟ್ಟ.
**ದಿನಾಂಕ: --/-- / --**

**ಮಾತೃಶ್ರೀಯವರಿಗೆ,**

ನಿಮ್ಮ ಮಗಳು ಮಾಡುವ ನಮಸ್ಕಾರಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ, ನೀವೂ ಸಹ ಕ್ಷೇಮವೆಂದು ಭಾವಿಸಿರುತ್ತೇನೆ.

ಈ ಪತ್ರವನ್ನು ಬರೆದ ಉದ್ದೇಶವೇನೆಂದರೆ ನಾನು ಉತ್ತಮವಾಗಿ ಅಭ್ಯಾಸ ಮಾಡುತ್ತಿದ್ದೇನೆ. ಕ್ರೀಡೆ, ಪಾಠ ಪ್ರವಚನ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೇನೆ. ದಿನಾಂಕ:__/__/20__ರಂದು ನಮ್ಮ ಶಾಲೆಯಲ್ಲಿ ಪೋಷಕರ ಸಭೆ ನಡೆಯಲಿದ್ದು, ತಪ್ಪದೆ ಹಾಜರಾಗಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

**ನಮಸ್ಕಾರಗಳೊಂದಿಗೆ,**

**ಇಂತಿ ನಿಮ್ಮ ಮಗಳು**
ನಿಖಿತಾ

**ಹೊರ ವಿಳಾಸ**
**ಗೆ,**
ನಾಗಮ್ಮ,
ಹನೂರು,
ಕೊಳ್ಳೆಗಾಲ.

**XV. ಈ ಕೆಳಗಿನ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1*5=5**

**45. ರಾಷ್ಟ್ರೀಯ ಭಾವೈಕ್ಯ**

**ಪೀಠಿಕೆ:** ಭಾರತವು ಅನೇಕ ಜನಾಂಗಗಳು, ಪಂಗಡಗಳು ಇರುವಂತಹ ಒಂದು ವಿಶಾಲ ರಾಷ್ಟ್ರ. ಇಲ್ಲಿ ವಿವಿಧ ಭಾಷೆ, ಸಂಸ್ಕೃತಿ, ಧರ್ಮ, ಜಾತಿಗಳ ಜನರು ತಮ್ಮ ವಿವಿಧತೆಯನ್ನು ಮರೆತು ನಾವೆಲ್ಲರೂ ಭಾರತೀಯರು ಎಂಬ ರಾಷ್ಟ್ರೀಯ ಮನೋಭಾವನೆಯನ್ನು ಹೋದಿರುವುದೇ **ರಾಷ್ಟ್ರೀಯ ಭಾವೈಕ್ಯತೆ.**

**ವಿಷಯ ನಿರೂಪಣೆ :** ಭಾರತವು ಪ್ರಜಾಪ್ರಭುತ್ವ ತಳಹದಿಯ ಮೇಲೆ ರೂಪಿತವಾಗಿರುವ ಒಂದು ಜಾತ್ಯತೀತ ರಾಷ್ಟ್ರವಾಗಿದ್ದು ಪ್ರತಿಯೊಂದು ಧರ್ಮೀಯರು ತಮ್ಮ ಸಂಪ್ರದಾಯ, ಪದ್ಧತಿಗಳನ್ನು ಅಚರಿಸಲು ಅವಕಾಶವಿದೆ.

ಭಾರತವು ವಿವಿಧ ಧರ್ಮ, ಭಾಷೆ, ಬುಡಕಟ್ಟು, ಜನಾಂಗಗಳನ್ನು ಹೊದಿಂದ್ದು, ವೈವಿದ್ಯತೆಯನ್ನು ಕಾಣುತ್ತೇವೆ. ದೇಶದ ಎಲ್ಲ ಭಾಗಗಳಲ್ಲಿಯೂ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಭೌಗೋಳಿಕವಾಗಿ ; ನಂಬಿಕೆ ಮತ್ತು ಆಚರಣೆಗಳಲ್ಲಿ ವೈವಿಧ್ಯತೆಯನ್ನು ಹೊಂದಿದೆ. ಆದರೂ ನಮ್ಮಲ್ಲಿ ನಾವು ಭಾರತೀಯತೆ ಎಂಬ ಬಲವಾದ ಬೇರಿದೆ. ನಮ್ಮ ದೇಶದ ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರಲಾಂಛನ ಇವು ನಮ್ಮ ಏಕತೆಯ ಸಂಕೇತಗಳಾಗಿದ್ದು ದೇಶಪ್ರೇಮ, ದೇಶಾಭಿಮಾನವನ್ನು ಮೂಡಿಸುತ್ತವೆ. ಇಡೀ ದೇಶವೇ ವೈವಿಧ್ಯಮಯವಾದ ಸಾಂಸ್ಕೃತಿಕ ಪರಿಸರದಲ್ಲಿರುವಾಗ ನಾವು ಒಂದೇ ಮನೆಯವರಂತೆ ಕೂಡಿ ಬಾಳುತ್ತಿರುವುದು ಇಡೀ ಜಗತ್ತಿಗೆ ಮಾದರಿಯಾಗಿದೆ ಎಂದು ಹೇಳಬಹುದು.

**ಉಪಸಂಹಾರ:** ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿಯ ಗಾಳಿಯು ಇಡೀ ವಿಶ್ವವನ್ನೇ ನಡುಗಿಸುತ್ತಿದೆ. ಆದರೆ ಭಾರತೀಯರಾದ ನಾವು ಮಾತ್ರ ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಪ್ರೀತಿ ಹಾಗೂ ಸೌಹಾರ್ದತೆಯಿಂದ ನಡೆದುಕೊಳ್ಳುತ್ತಾ, ನಮ್ಮ ದೇಶದ ಏಕತೆಯನ್ನು ಎತ್ತಿ ಹಿಡಿದಿದ್ದೇವೆ.

**ಅಥವಾ**

**ಮಹಿಳಾ ಸಬಲೀಕರಣ**

**ಪೀಠಿಕೆ:** ಸಮಾಜದಲ್ಲಿ ಯಾವುದೇ ತಾರತಮ್ಯವನ್ನು ಮಾಡದೆ ಪುರುಷರಿಗೆ ಇರುವಂತೆ ಸಮಾನವಾದ ಅವಕಾಶಗಳನ್ನು ಮಹಿಳೆಯರಿಗೆ ನೀಡಿ ಅವರಲ್ಲಿ ಬಲವನ್ನು ತುಂಬುವುದೇ ಮಹಿಳಾ ಸಬಲೀಕರಣ. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ವರ ಬಲವನ್ನು ಹೆಚ್ಚಿಸಿ ಅವರಲ್ಲಿ ಆತ್ಮವಿಶ್ವಾಸವನ್ನು ತುಂಬುವುದೇ ಆಗಿದೆ.

**ವಿಷಯ ನಿರೂಪಣೆ:** ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮಾನವಾದ ಸಾಮರ್ಥ್ಯ ಹೊಂದಿದ್ದು, ಕಾರಣಾಂತರಗಳಿಂದ ವಂಚಿತರಾಗಿದ್ದಾರೆ. ಅವರನ್ನು ಸಬಲರನ್ನಾಗಿ ಮಾಡಬೇಕಿದೆ. ಈ ಉದ್ದೇಶದಿಂದ ಸರ್ಕಾರವು ಹಲವು ಯೋಜನೆಗಳನ್ನು ಜಾರಿಗೊಳಿಸಿದೆ.

- ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯದಲ್ಲಿ ಮೀಸಲಾತಿ ನೀಡಿದೆ.
- ಸ್ತ್ರೀಶಕ್ತಿ ಯೋಜನೆ, ಮಹಿಳಾ ಸ್ವಸಹಾಯ ಸಂಘಗಳು ಸ್ಥಾಪನೆಯಾಗಿವೆ.
- ಭಾಗ್ಯಲಕ್ಷ್ಮೀ ಯೋಜನೆ, ಸುಕನ್ಯಾ ಸಮೃದ್ಧಿ ಯೋಜನೆಗಳು
- ನಾರಿಶಕ್ತಿ ಪುರಸ್ಕಾರ
- ಕೆಲಸದ ಸ್ಥಳದಲ್ಲಿ ಲಿಂಗಾಧಾರಿತ ತಾರತಮ್ಯದ ನಿಷೇಧ ಮಾಡಲಾಗಿದೆ.
- ದೌರ್ಜನ್ಯ ಮತ್ತು ಶೋಷಣೆಯಿಂದ ಕಾನೂನಿನ ರಕ್ಷಣೆ ಇತ್ಯಾದಿ ಕ್ರಮಗಳ ಮೂಲಕ ಪುರುಷರಿಗೆ ಸರಿಸಮಾನವಾದ ಅವಕಾಶಗಳನ್ನು ನೀಡುತ್ತಾ ಸಶಕ್ತರನ್ನಾಗಿ ಮಾಡಲಾಗುತ್ತಿದೆ.

**ಉಪಸಂಹಾರ :** ಯಾವುದೇ ಮಿತಿ ನಿರ್ಬಂಧಗಳಿಲ್ಲದೆ ಶಿಕ್ಷಣ, ಉದ್ಯೋಗ, ಜೀವನಶೈಲಿ ಮೊದಲಾದ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಪಡೆಯಲು ಸಾಧ್ಯವಾದಾಗ ಮಹಿಳೆಚುರು ಸಬಲರಾಗುತ್ತಾರೆ. ಇದು ಅರಿವು, ಶಿಕ್ಷಣ, ತರಬೇತಿಗಳ ಮೂಲಕ ಅವರ ಸ್ಥಾನಮಾನವನ್ನು ಹೆಚ್ಚಿಸುವುದನ್ನು ಒಳಗೊಂಡಿದೆ.

****************

# ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

## ಕಲಾಸಿಪಾಳ್ಯ, ಬೆಂಗಳೂರು–02

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 100** ಮಾದರಿ ಪ್ರಶ್ನೆ ಪತ್ರಿಕೆ 3 **ಅವಧಿ : 3ಗಂ. 15ನಿಮಿಷಗಳು**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಉತ್ತರದ ಕ್ರಮಾಕ್ಷರದೊಂದಿಗೆ ಬರೆಯಿರಿ:** **6 X 1 = 6**

1. 'ದೇವೇಂದ್ರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.
   (ಎ) ಲೋಪ ಸಂಧಿ (ಬಿ) ಆಗಮ ಸಂಧಿ (ಸಿ) ಗುಣ ಸಂಧಿ ಡಿ) ಆದೇಶ ಸಂಧಿ
2. ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಬಳಸುವ ಲೇಖನ ಚಿಹ್ನೆ
   (ಎ) ಉದ್ಧರಣ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ (ಸಿ) ಆವರಣ ಚಿಹ್ನೆ (ಡಿ) ವಿವರಣಾತ್ಮಕ ಚಿಹ್ನೆ
3. ಹಳಗನ್ನಡ ಪಂಚಮೀ ವಿಭಕ್ತಿ ಪ್ರತ್ಯಯವಿದು.
   (ಎ) ಇಂದಂ (ಬಿ) ಅನ್ನು (ಸಿ) ಅತ್ತಣಿಂ (ಡಿ) ಒಳ್
4. 'ಹನುಮಭೀಮರಾಮರು' ಪದವು ಈ ಸಮಾಸಕ್ಕೆ ಉದಾಹರಣೆ:
   (ಎ) ತತ್ಪುರುಷ ಸಮಾಸ (ಬಿ) ಕರ್ಮಧಾರೆಯ ಸಮಾಸ (ಸಿ) ದ್ವಂದ್ವ ಸಮಾಸ (ಡಿ) ಕ್ರಿಯಾ ಸಮಾಸ.
5. ಈ ಕೆಳಗಿನ ಪದಗಳಲ್ಲಿ ದ್ವಿರುಕ್ತಿ ಪದ.
   (ಎ) ಕೆನೆಮೊಸರು (ಬಿ) ಸುತ್ತಮುತ್ತ (ಸಿ) ಮಕ್ಕಳುಮರಿ (ಡಿ) ಊರೂರು
6. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಿದ್ದರೆ ಅದನ್ನು ಹೀಗೆನ್ನುವರು.
   (ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತವಾಕ್ಯ (ಸಿ) ಮಿಶ್ರವಾಕ್ಯ (ಡಿ) ಪ್ರಶ್ನಾರ್ಥಕವಾಕ್ಯ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ: 4X1=4**

7. ಮಾಡೋಣ : ವಿಧ್ಯರ್ಥಕ :: ಮಾಡರು ___________
8. ದ್ರೋಣ : ಅಂಕಿತನಾಮ :: ವಿದ್ಯಾರ್ಥಿ : ___________
9. ಪೆರ್ಮೆ : ತದ್ಧಿತಾಂತ ಭಾವನಾಮ :: ಮಾಡಲಿಕ್ಕೆ : ___________
10. ವಂಧ್ಯಾ : ಬಂಜೆ : : ಧಾತೃ : ________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 X 1 = 7**

11. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು?
12. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?
13. 'ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?
14. ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರೇನು?
15. ನದೀಜಲಗಳು ಏನಾಗಿವೆ?
16. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?
17. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿ :** **10 x 2 = 20**

18. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳೇನು?
19. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?
20. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?
21. ರಾಜಸಭೆಯಲ್ಲಿ ಅಗ್ನಿಭೂತಿ ವಾಯುಭೂತಿಯರನ್ನು ಮೂರ್ಖರೆಂದು ತೀರ್ಮಾನಿಸಿದ್ದೇಕೆ?
22. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?
23. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?
24. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?

25. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ?

26. ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿ?

27. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ:** **2 x 3 = 6**

28. ದೇವನೂರ ಮಹಾದೇವ

29. ಕುವೆಂಪು

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1 x 3 = 3**

30. ನೆಲಕಿಜೆವೆನೆಂದು ಬಗೆದಿರೆ।
ಚಲಕಿಜೆವೆಂ ಪಾಂಡುಸುತರೊಳೀನೆಲನಿದು ಪಾ॥

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** **1 x 3 = 3**

31. "ಮಾರಿಗೌತಣವಾಯ್ತು ನಾಳಿನ ಭಾರತವು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1 x 3 = 3**

32. ಕೈ ಕೆಸರಾದರೆ ಬಾಯಿ ಮೊಸರು.

**ಅಥವಾ**

ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.

**IX. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ.** 6 x 3 = 18

33. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ."

34. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"

35. "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ"

36. "ಮಾರಿಗೌತಣವಾಯ್ತು ನಾಳಿನ ಭಾರತವು."

37. "ಜಾನಕಿಯ ಮಗನಿದಕೆ ಬೆದರುವನೆ"

38. "ಜಲಕ್ಕನೀಗಳರಜೆದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ"

**X. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 x 4 = 4**

39. ನೀಲ ಮೇಘ ಮಂಡಲ ..............................................
..........................................................................
.......................................................................... .
............................................ ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗ ಯುಗಗಳ ....................................................
..........................................................................
..........................................................................
............................................ ಹಕ್ಕಿ ಹಾರುತಿದೆ ನೋಡಿದಿರಾ?

**XI. ಕೆಳಗಿನ ಪದ್ಯಭಾಗದಲ್ಲಿ ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 x 4 = 4**

40. ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ
ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ
ಹಲಗರಹಳ್ಳಿ ಮುಧೋಳ ಹತ್ತರ ಮೆರೆಯಿತೊ ಸುತ್ತಮುತ್ತ
ಪೂಜೇರಿ ಹನುಮಾ ಬ್ಯಾಡರ ಬಾಲ ಜಡಗರಾಮ ಮಸಲತ್ತ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **2 X 4 = 8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

**ಅಥವಾ**

ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X4 = 4 [2+2]**

43. ಪುಟ್ಟರಾಜರು ಸಾಮಾನ್ಯ ಕುಟುಂಬದಲ್ಲಿ ಜನಿಸಿ, ಸಮಾಜದ ಜೊತೆ ಬೆರೆತು, ವಿಶ್ವದ ಕಣ್ಮಣಿಯಾಗಿದ್ದಾರೆ. ಪುಟ್ಟರಾಜರು ಹಾವೇರಿ ಜಿಲ್ಲೆಯ ಹಾನಗಲ್ಲ ತಾಲೂಕಿನ ದೇವರ ಹೊಸಪೇಟೆಯ ವೆಂಕಟಾಪುರ ಮಠದ ಜಂಗಮ ದಂಪತಿಗಳಾದ ರೇವಣ್ಣಯ್ಯ ಮತ್ತು ಸಿದ್ದಮ್ಮ ಅವರ ಮಗನಾಗಿ 1914 ರ ಮಾರ್ಚ್ 3 ರಂದು ಜನಿಸಿದರು. ಬಾಲ್ಯದಲ್ಲಿಯೆ ಕಣ್ಣು ಕಳೆದುಕೊಂಡ ಅವರು "ನಾನು ಹುಟ್ಟಿದ ಆರು ತಿಂಗಳಿಗೆ ದೃಷ್ಟಿ ಹೋಗ್ಯಾವ, ಕಣ್ಣು ಬೇನೆ ಬಂದು ಕಣ್ಣಿಗೆ 'ಪರಿ' ಅಂತ ಬರತೈತಲ್ಲ, ಅಮ್ಮ 'ಅರೀ' ಅಂತಾರ. ಆವಾಗ ಬರೀ ನಾಟೀ ವೈದ್ಯ ಇತ್ತು. ಅವರು ಕಣ್ಣುಗುಡ್ಡಿಗೆ ತೊನಸಿಯನ್ನು (ನಾಯಿಯ ಮೈಯಲ್ಲಿರುವ ಹುಳು) ಮುಟ್ಟಿಸಬೇಕು ಅಂತ ಹೇಳಿದ್ದರು. ಆಗ ಮುಟ್ಟಿಸುವಾಗ ತೊನಸಿ ಕೈಜಾರಿ ಕಣ್ಣು ಒಳಗ ಬಿದ್ದುಬಿಟ್ಟವು. ಆವಾಗ ಅದು ಅರಿ ಹರಿಯುವುದರ ಬದಲು, ಗುಡ್ಡಿನ ಹರಿದು ಕಣ್ಣು ಹೋಗಿ ಬಿಟ್ಟವು." ಹೀಗೆ ಹೇಳುವಾಗ ಗವಾಯಿಗಳಲ್ಲಿ ಯಾವ ವೇದನೆಯೂ ಇರುತ್ತಿರಲಿಲ್ಲ.

ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವ ಆಸೆ. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತನ್ನ ಮಾವನ ಹಾರ್ಮೋನಿಯಮ್ ಹಿಡಿದು ತಲ್ಲೀನನಾಗಿ ನುಡಿಸಲಾರಂಭಿಸಿದ. ಹಾರ್ಮೋನಿಯಮ್‌ನಿಂದ ಹೊರಟ ನಾದ ಮನೆಯನ್ನು ತುಂಬಿ, ಮನೆಯ ಮುಂದೆ ಹಾಯ್ದು ಹೋಗುತ್ತಿದ್ದ ಜನರೆಲ್ಲರ ಮನವನ್ನು ತುಂಬಿತು. ನಾದ ಮಾಧುರ್ಯಕ್ಕೆ ಮನಸೋತ ಜನರು ಮನೆಯ ಒಳಗೆ ಬಂದು ಕುಳಿತುಕೊಂಡರು. ಹೊಲಕ್ಕೆ ಹೋಗಿದ್ದ ಬಾಲಕನ ಮಾವ ಮನೆಯ ಹೊರಗೆ, ಒಳಗೆ ಜನರ ಗುಂಪು ಕಂಡು ಆಶ್ಚರ್ಯಚಕಿತರಾದರು.

**ಪ್ರಶ್ನೆಗಳು :**

ಅ) ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡಿದ್ದು ಹೇಗೆ?

ಆ) ಬಾಲಕ ಪುಟ್ಟಯ್ಯ ಹಾರ್ಮೋನಿಯಮ್ ನುಡಿಸಿದ ಪ್ರಸಂಗವನ್ನು ವಿವರಿಸಿ.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 X 5 = 5**

44. ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ರಘುನಂದನ್' ಎಂದು ಭಾವಿಸಿಕೊಂಡು, 'ಕನ್ನಡ ವಿಶ್ವಕೋಶ' ಕಳುಹಿಸಿಕೊಡುವಂತೆ ಕೋರಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇವರಿಗೊಂದು ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಶುಭ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಗಣರಾಜ್ಯೋತ್ಸವ' ಕಾರ್ಯಕ್ರಮವನ್ನು ಕುರಿತು ಕೋಲಾರದಲ್ಲಿ ವಾಸವಾಗಿರುವ 'ಅನ್ನಪೂರ್ಣಮ್ಮ' ಎಂಬ ಹೆಸರಿನ ತಾಯಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5**

45. ಗ್ರಾಮಸ್ವರಾಜ್ಯ

**ಅಥವಾ**

ತ್ಯಾಜ್ಯವಸ್ತು ನಿರ್ವಹಣೆ

**********

## ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

## ಕಲಾಸಿಪಾಳ್ಯ, ಬೆಂಗಳೂರು–02

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 100** ಮಾದರಿ ಪ್ರಶ್ನೆ ಪತ್ರಿಕೆ 4 **ಅವಧಿ : 3ಗಂ. 15ನಿಮಿಷಗಳು**

**I. ಪ್ರತಿಯೊಂದು ಹೇಳಿಕೆಯ ಕೆಳಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಬರೆಯಿರಿ.** **6 X 1 = 6**

1. 'ಕಣ್ದೆರೆ' ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ.
   ಎ) ತತ್ಪುರುಷ ಬಿ) ದ್ವಿಗು ಸಿ) ಗಮಕ ಡಿ) ಕ್ರಿಯಾ
2. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಬಳಸುವ ಲೇಖನ ಚಿಹ್ನೆಇದು.
   ಎ) ಪೂರ್ಣ ವಿರಾಮ ಬಿ) ಅರ್ಧವಿರಾಮ ಸಿ) ಅಲ್ಪವಿರಾಮ ಡಿ) ಭಾವಸೂಚಕ
3. ಹಳಗನ್ನಡ ಸಪ್ತಮೀ ವಿಭಕ್ತಿ ಪ್ರತ್ಯಯವಿದು.
   ಎ) ಇಂದಂ ಬಿ) ಅನ್ನು ಸಿ) ಅತ್ತಣಿಂ ಡಿ) ಒಳ್
4. 'ಧಗಧಗ' ಪದ ಈ ಅವ್ಯಯಕ್ಕೆ ಉದಾಹರಣೆ.
   ಎ) ಅನುಕರಣಾವ್ಯಯ ಬಿ) ಸಾಮಾನ್ಯಾರ್ಥಕಾವ್ಯಯ ಸಿ) ಕ್ರಿಯಾರ್ಥಕಾವ್ಯಯ ಡಿ) ಭಾವಸೂಚಕಾವ್ಯಯ
5. ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.
   ಎ) ಅವಧಾರಣೆ ಬಿ) ಸಾಮಾನ್ಯ ಅವ್ಯಯ ಸಿ) ಸಂಬಂಧಾರ್ಥಕಾವ್ಯಯ ಡಿ) ಭಾವಸೂಚಕಾವ್ಯಯ
6. ಇವುಗಳಲ್ಲಿ ವಿಧ್ಯರ್ಥಕ ಕ್ರಿಯಾರೂಪವಿದು.
   ಎ) ಮಾಡೀತು ಬಿ) ಮಾಡದು ಸಿ) ಮಾಡಲಿ ಡಿ) ಮಾಡಿಯಾವು

**II. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4 X 1 = 4**

7. ಯುದ್ಧ : ಜುದ್ಧ : : ಯಜ್ಞ : ____________
8. ಸ್ವರಗಳು : ಹದಿಮೂರು : : ಯೋಗವಾಹಕಗಳು : ________
9. ಊರೂರು : ಲೋಪಸಂಧಿ : : ಕೈಯನ್ನು : ___________
10. ಅಬ್ಬೆ : ತಾಯಿ : : ಅರ್ತಿ : ____________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 X 1 = 7**

11. ಮನುಷ್ಯನಿಗೆ ಲೆಕ್ಕವಿಡುವ ಆವಶ್ಯಕತೆ ಯಾವಾಗ ಉಂಟಾಯಿತು?
12. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?
13. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
14. ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ದೊರೆತ ಪದವಿ ಯಾವುದು?
15. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
16. ಕಾಡುಮೇಡುಗಳ ಸ್ಥಿತಿ ಹೇಗಿದೆ?
17. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರೇನು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10 x 2 = 20**

18. ಲಿಪಿಯ ಮೂಲಕ ಜ್ಞಾನ ಭಂಡಾರ ಯಾವ ರೀತಿ ಭದ್ರವಾಯಿತು?
19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?
20. ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?
21. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?
22. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?
23. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?
24. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

25. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ?

26. ರಾಜರ ಪ್ರಕೃತಿ ಹೇಗಿರುತ್ತದೆ?

27. ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. 2 x 3 = 6**

28. ಎ. ಎನ್. ಮೂರ್ತಿರಾವ್ 29. ಪಂಪ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

29. ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 x 3 = 3**

30. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3**

30. ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.

**ಅಥವಾ**

ಆಳಾಗಬಲ್ಲವನು; ಅರಸಾಗಬಲ್ಲನು.

**IX. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ. 6 x 3 = 18**

31. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ."

32. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?"

33. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!"

34. "ಮುಂಗಾರಿನ ಮಳೆಯಾಗೋಣ."

35. "ಹೊಸಗಾಲದ ಹಸುಮಕ್ಕಳ ಹರಸಿ"

36. "ಜೀವ ಸತ್ತು ಹೋಗುವುದು ಗೊತ್ತ"

**X. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4**

37. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

____________________

______________________________

____________________

____________________

ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು.

**ಅಥವಾ**

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ

____________________

______________________________

____________________

____________________

ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು. ॥

**XI. ಕೆಳಗಿನ ಪದ್ಯಭಾಗದಲ್ಲಿ ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ: 1 x 4 = 4**

38. ನಿಮಗೆ ಪೊಡೆಮಟ್ಟು ಪೋಪೀ।
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ॥
ಸಮಕೊಳಿಸಲೆಂದು ಬಂದೆನೆ।
ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

39. ಸಪ್ತವ್ಯಸನಿಗಳಾಗಿದ್ದ ಅಗ್ನಿಭೂತಿ ವಾಯುಭೂತಿಯರು ಪಂಡಿತರಾದುದು ಹೇಗೆ?

**ಅಥವಾ**

ಸೂರ್ಯಮಿತ್ರನು ತಮ್ಮ ಮಾವನೆಂದು ತಿಳಿದಾಗ ಅಗ್ನಿಭೂತಿ ವಾಯುಭೂತಿಯರಲ್ಲಿ ಮೂಡಿದ ಭಾವನೆಗಳೇನು? ವಿವರಿಸಿ.

40. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**ಅಥವಾ**

ಕರ್ಣನ ನಿರ್ಧಾರ ಸರಿ ಎನ್ನುವಿರಾ? ಏಕೆ?

**XIII. ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತರ ಬರೆಯಿರಿ. 2x2= 4**

41. ಬೋಧಿವೃಕ್ಷದ ಅಡಿಯಲ್ಲಿ ಸಿದ್ಧಾರ್ಥನಿಗೆ ಜ್ಞಾನೋದಯವಾಗಿ ಬುದ್ಧನಾದನು. ಆ ಸಂದರ್ಭದಲ್ಲಿ ಮರದ ಆಶ್ರಯ ಪಡೆದ ಬಳ್ಳಿಯು ಹೂ ಅರಳಿಸಿ ಸುಗಂಧವನ್ನು ಹೊರ ಸೂಸಿತು. ತಾಯಿ ಹಕ್ಕಿಯೊಂದು ತನ್ನ ಮರಿಗೆ ಆಹಾರವನ್ನು ಕೊಟ್ಟು ಸಂತೋಷದಿಂದ ಹಾರಾಡಿತು. ಇರುವೆಗಳು ಹುತ್ತದಿಂದ ಸಾಲು-ಸಾಲಾಗಿ ಹೊರಗೆ ಬರುವಂತೆ, ಬೆಳ್ಳಕ್ಕಿಗಳು ಗುಂಪು-ಗುಂಪಾಗಿ ಉದ್ದನೆಯ ಸಾಲು ಮಾಡಿ ಆಕಾಶಕ್ಕೆ ಏಣಿ ಹಾಕಿದಂತೆ ಪ್ರಕೃತಿಯಲ್ಲಿ ವಿಸ್ಮಯ ಕಂಡು ಬಂದಿತು. ಪ್ರಪಂಚದ ಐಹಿಕ ಸುಖಗಳಿಂದ ದೂರವಾದ ಸಿದ್ಧಾರ್ಥನ ಮನಸ್ಸು ಸಂತೋಷದಿಂದ ನಲಿಯಿತು. ಕಾಡಿನ ತುಂಬ ಪ್ರೀತಿಯೆಂಬ ಅಲೆಯು ನೀರಿನಂತೆ ಹರಿಯಿತು. ಹಕ್ಕಿಗಳ ಗೂಡಿನಲ್ಲಿ ಹಾಡು ಹುಟ್ಟಿ, ಹೊಸ ರಾಗ ಹಾಡುವಂತೆ, ಹೂವಿನಲ್ಲಿರುವ ಮಕರಂದವನ್ನು ಸವಿಯಲು ದುಂಬಿಯು ಹೂವನ್ನು ಸೇರುವಂತೆ, ಮರ-ಗಿಡಗಳು ಪರಸ್ಪರ ಅಪ್ಪಿಕೊಂಡು ಕುಣಿಯುವಂತೆ, ಸಿದ್ಧಾರ್ಥನು ತನಗೆ ಆದ ಜ್ಞಾನದ ಅನುಭವವನ್ನು ಜನರಿಗೆ ತಿಳಿಸಲು ಸಂತೋಷದಿಂದ ಮುಂದೆ ನಡೆದನು.

**ಪ್ರಶ್ನೆಗಳು :**

ಅ) ಸಿದ್ಧಾರ್ಥನು ತನಗೆ ಆದ ಜ್ಞಾನದ ಅನುಭವವನ್ನು ಜನರಿಗೆ ತಿಳಿಸಲು ಹೇಗೆ ಬಂದನು?

ಆ) ಸಿದ್ಧಾರ್ಥನಿಗೆ ಜ್ಞಾನೋದಯವಾದಾಗ ಪ್ರಕೃತಿಯಲ್ಲಾದ ವಿಸ್ಮಯವೇನು?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5= 5**

42. ನಿಮ್ಮನ್ನು ಧಾರವಾಡದ ಕಾಡ ಸಿದ್ದೇಶ್ವರ ಪ್ರೌಢಶಾಲೆಯಲ್ಲಿ ಓದುತ್ತಿರುವ ನಂದನ್/ ನಂದಿತ ಎಂದು ಭಾವಿಸಿಕೊಂಡು ನಿಮ್ಮ ಜಿಲ್ಲಾ ಮಟ್ಟದಲ್ಲಿ ನಡೆಯುವ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನಿಸಿ ಬೆಂಗಳೂರಿನಲ್ಲಿ ಓದುತ್ತಿರುವ ನಿಮ್ಮ ಸ್ನೇಹಿತ/ತೆಗೊಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ದಾವಣಗೆರೆಯ ಮುರಾರ್ಜಿದೇಸಾಯಿ ವಸತಿಶಾಲೆಯ ವಿದ್ಯಾರ್ಥಿ 'ನರೇಶ್' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವದ ವರದಿಯನ್ನು ಪ್ರಕಟಿಸುವಂತೆ ಕೋರಿ ನಿಮ್ಮೂರಿನ ಪ್ರಜಾವಾಣಿ ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5**

43. ಸ್ವಚ್ಛ ಭಾರತ ಅಭಿಯಾನ

**ಅಥವಾ**

ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

*************

# ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

## ಕಲಾಸಿಪಾಳ್ಯ, ಬೆಂಗಳೂರು-02

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 100** ಮಾದರಿ ಪ್ರಶ್ನೆ ಪತ್ರಿಕೆ 5 **ಅವಧಿ : 3ಗಂ. 15ನಿಮಿಷಗಳು**

**I. ಪ್ರತಿಯೊಂದು ಹೇಳಿಕೆಯ ಕೆಳಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಬರೆಯಿರಿ.** **6 X 1 = 6**

1. 'ಕೋಟ್ಯಧೀಶ್ವರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.
   ಎ) ಜಶ್ತ್ವಸಂಧಿ ಬಿ) ಶ್ಚುತ್ವಸಂಧಿ ಸಿ) ಯಣ್‌ಸಂಧಿ ಡಿ) ವೃದ್ಧಿಸಂಧಿ
2. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.
   ಎ) ವಿವರಣಾತ್ಮಕ ಚಿಹ್ನೆ ಬಿ) ವಾಕ್ಯವೇಷ್ಟನಚಿಹ್ನೆ ಸಿ) ಉದ್ಧರಣ ಚಿಹ್ನೆ ಡಿ) ಆವರಣಚಿಹ್ನೆ
3. ಸಪ್ತಮೀ ವಿಭಕ್ತಿಯ ಕಾರಕಾರ್ಥವಿದು.
   ಎ) ಅಪಾದಾನ ಬಿ) ಸಂಪ್ರದಾಯ ಸಿ) ಅಧಿಕರಣ ಡಿ) ಸಂಬಂಧ
4. ಇದು ಸಂಬಂಧಾರ್ಥಕಾವ್ಯಯಕ್ಕೆ ಉದಾಹರಣೆಯಾಗಿದೆ.
   ಎ) ಅವನೇ ಬಿ) ಆಹಾ! ಸಿ) ಆದ್ದರಿಂದ ಡಿ) ದಡದಡ
5. ಇವುಗಳಲ್ಲಿ ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ.
   ಎ) ಸಿರಿತನ ಬಿ) ಕನ್ನಡಿಗ ಸಿ) ನಿನಗಾಗಿ ಡಿ) ಮಾಲೆಗಾರ
6. 'ಇಸವಾಸ' ಪದದ ಗ್ರಾಂಥಿಕ ರೂಪವಿದು.
   ಎ) ವಿಶೇಷ ಬಿ) ವಿಶ್ವಾಸ ಸಿ) ವಿಷವಾಸ ಡಿ) ವಿಶದ

**II. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4 X 1 = 4**

7. ಮೆಲ್ಲಮೆಲ್ಲನೆ : ದ್ವಿರುಕ್ತಿ :: ಮಕ್ಕಳುಮರಿ : ______
8. ಪಾದುಕಾ : ಹಾವುಗೆ :: ಅಂಕುಶ : ________
9. ಇಮ್ಮಾವು : ಕರ್ಮಧಾರಯ ಸಮಾಸ :: ನೇಯ್ದುವಸ್ತ್ರ : ________
10. ಅವರು : ಪ್ರಥಮಪುರುಷ :: ತಾವು : ________

**III ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 X 1 = 7**

11. ಶಾನುಭೋಗರ 'ಬ್ರಹ್ಮಾಸ್ತ್ರ' ಯಾವುದು?
12. ಯುದ್ಧದ ಬಗೆಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು?
13. 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಯಾರು?
14. ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಲು ಕಾರಣವೇನು?
15. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ಯಾರು?
16. ಹಲಗಲಿ ಗುರುತು ಉಳಿಯದಂತಾದುದು ಏಕೆ?
17. ಅರಿಯದವರೊಡನೆ ಸಂಗ ಮಾಡಿದರೆ ಆಗುವ ಪರಿಣಾಮವೇನು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10 x 2 = 20**

18. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?
19. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?
20. ಪೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?
21. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?
22. ಪಾರ್ಥ-ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?
23. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು?
24. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?
25. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

26. ಅರಿಯದವರೊಡನೆ ಸಂಗ ಮಾಡಿದರೆ ಆಗುವ ಪರಿಣಾಮವೇನು?

27. ಗುರೂಪದೇಶವು ಯಾರಿಗೆ ಮೆಚ್ಚಿಗೆ ಯಾಗುವುದಿಲ್ಲ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : 2 x 3 = 6**

28. ಸಾ ರಾ ಅಬೂಬಕ್ಕರ್

29. ಕುವೆಂಪು

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 x 3 = 3**

31. "ಬಾನಿನಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3**

32. ಕೂಡಿಬಾಳಿದರೆ ಸ್ವರ್ಗ ಸುಖ.

**ಅಥವಾ**

ಮಾತೇ ಮುತ್ತು, ಮಾತೇ ಮೃತ್ಯು

**IX ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ. 6 x 3 = 18**

33. "ಸಂಸ್ಕೃತಿಯ ಇತಿಹಾಸ ಉಳಿಯಿತು"

34. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."

35. "ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಟ್ಟಿಯೊಳ್ ಬಂದಿರಪ್ಪೊಡೆ"

36. "ಸಾರ್ವಭೌಮರಾ ನೆತ್ತಿಯ ಕುಕ್ಕಿ"

37. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"

38. "ಈಗಳೊಂದಡಕೆಯುಮಿಲ್ಲ ಕೈಯೊಳ್"

**X. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4**

| | | |
|---|---|---|
| 39. ಕಲುಷಿತವಾದೀ .................................... | | ಮತಗಳೆಲ್ಲವೂ.................................... |
| ............................................................ | | ............................................................ |
| ............................................................ | **ಅಥವಾ** | ............................................................ |
| ........................................ ಮುಟ್ಟೋಣ | | ............................................ ಬಿತ್ತೋಣ |

**XI ಕೆಳಗಿನ ಪದ್ಯಭಾಗದಲ್ಲಿ ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 x 4 = 4**

40. ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

41. ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

**ಅಥವಾ**

ಲವನ ನಡೆವಳಿಕೆ ಮೆಚ್ಚುಗೆಯಾಯಿತೇ? ಏಕೆ?

**XIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4 = (2+2)**

43. ಕೆಲವು ದಿನಗಳ ತರುವಾಯ ರಂಗಣ್ಣ ಸ್ಕೂಲುಗಳ ಭೇಟಿಗೆಂದು ಹೊರಟ. ತಿಪ್ಪೇನಹಳ್ಳಿಯ ಮೇಷ್ಟ್ರು ನಿಜವಾಗಿಯೂ ರೂಲ್ಸಿಗೆ ವಿರುದ್ಧವಾಗಿ ನಡೆಯುತ್ತಿದ್ದಾನೆಯೋ? ಇನ್ನೂ ಇತರರು ಯಾರು ಹಾಗೆ ದಾಖಲೆಯಿಲ್ಲದ ಮಕ್ಕಳನ್ನು ಸೇರಿಸಿಕೊಂಡಿದ್ದಾರೆ? ನೋಡೋಣ ಎಂದು ಆಲೋಚಿಸುತ್ತ ತಿಪ್ಪೇನಹಳ್ಳಿಗೆ ಸುಮಾರು ಒಂಬತ್ತು ಗಂಟೆ ಹೊತ್ತಿಗೆ ಹೋದ. ರಂಗಣ್ಣ ಬೈಸ್ಕಲ್ಲಿಂದ ಇಳಿದು, ಆದನ್ನು ಗೋಡೆಗೆ ಒರಗಿಸಿದನು. ಮೇಷ್ಟ್ರು ವೆಂಕಣ್ಣ ಭಯದಿಂದ ನಡುಗುತ್ತ ಹೊರಕ್ಕೆ ಬಂದು ನಮಸ್ಕಾರ ಮಾಡಿದನು. ಪಾಠಶಾಲೆಯ ಗೋಡೆಗೆ ನೋಟೀಸ್ ಬೋರ್ಡ್ 1) ಮೇಲೆ ಮಕ್ಕಳು ಸರಿಯಾದ ಹೊತ್ತಿಗೆ ಬರಬೇಕು. 2) ಪಾಠಕಾಲದಲ್ಲಿ ಗ್ರಾಮಸ್ಥರು ಒಳಕ್ಕೆ ಬರಕೂಡದು. 3) ದಾಖಲೆಯಿಲ್ಲದ ಮಕ್ಕಳನ್ನು ಒಳಕ್ಕೆ ಸೇರಿಸುವುದಿಲ್ಲ. 4) ಸ್ಕೂಲಿನ ಒಪ್ಪಾರದಲ್ಲಿ ಗ್ರಾಮಸ್ಥರು ಯಾರೂ ಕುಳಿತು ಗಲಾಟೆ ಮಾಡಕೂಡದು. ಎಂದು ಬರೆಯಲಾಗಿತ್ತು. – ಎಂದು ದಪ್ಪಕ್ಷರಗಳಲ್ಲಿ ಬರೆದಿತ್ತು. ರಂಗಣ್ಣ ಅವುಗಳನ್ನೆಲ್ಲಾ ನೋಡಿ ತೃಪ್ತಿಪಟ್ಟುಕೊಂಡನು. **"ಮೇಷ್ಟ್ರೇ!** ಹಿಂದೆ ಸಾಹೇಬರು ಬಂದಾಗ ಈ ನೋಟೀಸ್ ಬೋರ್ಡ್‌ನ್ನು ಇಲ್ಲಿ ಹಾಕಿರಲಿಲ್ಲವೇ?**"** ಎಂದು ಕೇಳಿದನು.

**ಪ್ರಶ್ನೆಗಳು:**

ಎ) ತಿಪ್ಪೇನಹಳ್ಳಿ ಪಾಠಶಾಲೆಯ ನೋಟೀಸ್ ಬೋರ್ಡಿನ ಮೇಲೆ ಏನೆಂದು ಬರೆಯಲಾಗಿತ್ತು?

ಬಿ) ರಂಗಣ್ಣ ತಿಪ್ಪೇನಹಳ್ಳಿ ಶಾಲೆಗೆ ಭೇಟಿ ನೀಡಲು ಕಾರಣವೇನು?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 x 5= 5**

44. ನಿಮ್ಮನ್ನು ಹಾಸನದ ವಿಜಯನಗರದ ನಿವಾಸಿ **'ವಸಂತಕುಮಾರ್'** ಎಂದು ಭಾವಿಸಿಕೊಂಡು, ನಿಮ್ಮ ಪ್ರದೇಶದಲ್ಲಿ ಉಂಟಾದ ಪ್ರವಾಹದ ಪರಿಸ್ಥಿತಿಯನ್ನು ವಿವರಿಸಿ, ಪರಿಹಾರ ಕಾರ್ಯಕ್ಕೆಗೊಳ್ಳುವಂತೆ ಕೋರಿ ಜಿಲ್ಲಾಧಿಕಾರಿಗೊಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯ ರಕ್ಷಿತ ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಕುರಿತು ಮೈಸೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ **'ಹರ್ಷಿಕ'** ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5**

45. ಮಹಿಳಾ ಸಬಲೀಕರಣ,

**ಅಥವಾ**

ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ತ್ವ.

***************

# ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

## ಕಲಾಸಿಪಾಳ್ಯ, ಬೆಂಗಳೂರು–02

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 100** ಮಾದರಿ ಪ್ರಶ್ನೆ ಪತ್ರಿಕೆ 6 **ಅವಧಿ : 3ಗಂ. 15ನಿಮಿಷಗಳು**

**I. ಪ್ರತಿಯೊಂದು ಹೇಳಿಕೆಯ ಕೆಳಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಬರೆಯಿರಿ.** **6 X 1 = 6**

1. 'ದಿಗಂತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ
   ಎ) ಗುಣ ಸಂಧಿ ಬಿ) ಜಶ್ತ್ವಸಂಧಿ ಸಿ) ವೃದ್ಧಿ ಸಂಧಿ ಡಿ) ಶ್ಚುತ್ವ ಸಂಧಿ
2. 'ತೊಡುಗೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ:
   ಎ) ಕೃದಂತನಾಮ ಬಿ) ಕೃದಂತ ಭಾವನಾಮ ಸಿ) ಕೃದಂತಾವ್ಯಯ ಡಿ) ತದ್ಧಿತಾಂತ ಭಾವನಾಮ
3. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ
   ಎ) ತತ್ಪುರುಷ ಸಮಾಸ ಬಿ) ದ್ವಿಗುಸಮಾಸ ಸಿ) ಅಂಶಿ ಸಮಾಸ ಡಿ) ಕ್ರಿಯಾ ಸಮಾಸ
4. 'ಮಾಡು' ಧಾತುವಿನ ವಿಧ್ಯರ್ಥಕ ರೂಪ
   ಎ) ಮಾಡೇವು ಬಿ) ಮಾಡಿಯಾರು ಸಿ) ಮಾಡರು ಡಿ) ಮಾಡಲಿ
5. 'ಸಾವಿತ್ರಿಗೆ' ಈ ಪದದಲ್ಲಿರುವ ವಿಭಕ್ತಿ
   ಎ) ಪ್ರಥಮಾ ಬಿ) ದ್ವಿತೀಯಾ ಸಿ) ತೃತೀಯ ಡಿ) ಚತುರ್ಥಿ
6. 'ವಿದ್ಯಾಧರ' ಪದದ ತದ್ಭವ ರೂಪ ಇದಾಗಿದೆ.
   ಎ) ಗಣಪತಿ ಬಿ) ಬಿಜ್ಜೋಧರ ಸಿ) ವಿನಾಯಕ ಡಿ) ಶಶಿಧರ

**II. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4 X 1 = 4**

7. ವರ್ಗೀಯ ವ್ಯಂಜನಾಕ್ಷರಗಳು : 25 :: ಅವರ್ಗೀಯ ವ್ಯಂಜನಾಕ್ಷರಗಳು : ________
8. ಹಾಲ್ಜೇನು : ಜೋಡುನುಡಿ :: ಬೇಡಬೇಡ : ____________
9. ಪರ್ವತ : ರೂಢನಾಮ :: ಧರ್ಮರಾಯ : ____________
10. ಮ್ಯಾಗ : ಮೇಲೆ :: ಸಕ್ಕಾರಿ : ________

**III ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 X 1 = 7**

11. ಹುಲಿಗೆ ಪರಮಾನಂದವಾಗಲು ಕಾರಣವೇನು?
12. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು?
13. ಇಂದಲ್ಲ–ನಾಳೆ ಫಲ ಕೊಡುವ ಅಂಶಗಳಾವುವು?
14. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?
15. ಹಕ್ಕಿಯ ಕಣ್ಣುಗಳು ಯಾವುವು?
16. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?
17. ಯಾರ ಕಿವಿಗೆ ಉಪದೇಶ ನಾಟವುದಿಲ್ಲ?

**IV ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10 x 2 = 20**

18. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.
19. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.
20. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯಾಭ್ಯಾಸದ ನಂತರ ಮಾವನೆಂದು ಹೇಳಲು ಕಾರಣವೇನು?
21. ಸೂರ್ಯಮಿತ್ರನು ಮಾವನೆಂದು ತಿಳಿದಾಗ ವಾಯುಭೂತಿಯ ಪ್ರತಿಕ್ರಿಯೆ ಹೇಗಿತ್ತು?
22. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?
23. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?
24. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?
25. ಜ್ಞಾನಿ – ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವೇನು ?

26. ನೆನಪಿನಲ್ಲಿ ಹಚ್ಚಿ ಚುಚ್ಚಿದಂತಿರುವ ಆ ದಿನದ ಬಗ್ಗೆ ಗೋವಿಂದ ಪೈ ಅವರು ಏನೆಂದು ಹೇಳಿದ್ದಾರೆ?

27. ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **2x 3 = 6**

28. ಪು. ತಿ. ನರಸಿಂಹಾಚಾರ್

**29**. ದ. ರಾ. ಬೇಂದ್ರೆ.

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1 x 3 = 3**

**30**. ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** **1 x 3 = 3**

31. "ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1 x 3 = 3**

32. ತಾಳಿದವನು ಬಾಳಿಯಾನು.

**ಅಥವಾ**

ಮನಸಿದ್ದರೆ ಮಾರ್ಗ.

**IX ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ.** **6 x 3 = 18**

33. "ಒಬ್ಬ ತಾಯಿಯ ಗಾನದ ಶ್ರುತಿಯಂತೆ"

34. "ಸಾಮಾಜಿಕ ಕಾನೂನುಗಳ ಹರಿಕಾರ."

35. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!

36. "ಹಸುರಾದುದು ಕವಿಯಾತ್ಮಂ"

37. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

38. 'ವಿದ್ಯಾಧನಮೆ ಧನಮಪ್ಪುದು'

**X. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 x 4 = 4**

39. ನೆಲಕಿಜಿವೆನೆಂದು ಬಗೆದಿರೆ

______________________________

________________

____________________ ಪುದುವಾಟ್ಟಪೆನೇ

**ಅಥವಾ**

ಪುಟ್ಟಿದ ನೂರ್ವರುಮೆನ್ನೊಡ

______________________________

_________________

___________________ ಛಲಮನೆ ಮೆಱೆವೆಂ

**XI ಕೆಳಗಿನ ಪದ್ಯಭಾಗದಲ್ಲಿ ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 x 4 = 4**

40. ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **2 X 4 = 8**

41. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?

**ಅಥವಾ**

'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.

42. ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?

**ಅಥವಾ**

ಹಲಗಲಿ ದಂಗೆಯ ಪರಿಣಾಮವೇನು?

**XIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** 4= (2+2)

43. ಅಂತರ್ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ. ತನ್ನ ಯೋಗ ಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು; ಸುಲಭವಾಗಿ ರಕ್ತಗತವಾಗುವುದಿಲ್ಲ. ಉಳಿದವರನ್ನು ಪ್ರೀತಿಯಿಂದ ಅವನು ಕಾಣಬಲ್ಲ. ತನ್ನಿಂದ ಆದಷ್ಟು ಯಾರಿಗೂ ತೊಂದರೆಯಾಗಬಾರದೆಂದು ಅವನು ಎಚ್ಚರ ಪಡಬಲ್ಲ. ಸಾಹಿತ್ಯಿಕ ದೃಷ್ಟಿಯಿಂದ ಪರಾಂತಃಕರಣವನ್ನು ಪ್ರವೇಶಿಸಿ ಅದನ್ನು ತಿಳಿದುಕೊಳ್ಳಲೂ ಬಲ್ಲ. ಆದರೆ ಉಳಿದ ಹೃದಯಗಳ ಆಸೆಗಳನ್ನು ತಾನಾಗಿಯೇ ಅಭ್ಯಸಿಸಿ ಅವುಗಳನ್ನು ಕಳೆಯಲು ಹವಣಿಸುವುದು ಅವನ ಸಹಜ ಸಿದ್ಧಿಯಾಚೆಗಿನ ಮಾತು. ಏಕೆಂದರೆ ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅವನ ಎಲ್ಲ ಶಕ್ತಿಯೂ ವೆಚ್ಚವಾಗುತ್ತದೆ. ತನ್ನ ಅಂತರಂಗದ ಭವ್ಯತೆಯು ಅವನನ್ನು ಕರೆಯುತ್ತಿರುತ್ತದೆ. ತನ್ನ ಗುಂಗಿನಲ್ಲಿದ್ದ ಈ ಅಂತರ್ಜೀವಿಗೆ ಪರರ ಹಂಗೆಲ್ಲಿ?

**ಪ್ರಶ್ನೆಗಳು :**

ಅ) ಉಳಿದವರ ಯೋಗ ಕ್ಷೇಮ ನೋಡಿಕೊಳ್ಳುವುದು ಅಂತರ್ಜೀವಿಗೆ ಸಮಸ್ಯೆಯಾಗಲು ಕಾರಣಗಳೇನು

ಆ) ಅಂತರ್ಜೀವಿಯ ಲಕ್ಷಣಗಳನ್ನು ಪಟ್ಟಿ ಮಾಡಿರಿ.

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** 1x 5= 5

44. ನಿಮ್ಮನ್ನು ರಾಮನಗರ ಸರ್ಕಾರಿ ಪ್ರೌಢಶಾಲೆಯ 'ಅಕುಲ/ ಸಹನ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವ ಸಮಾರೋಪ ಸಮಾರಂಭದ ವರದಿಯನ್ನು ಪ್ರಕಟಿಸುವಂತೆ ಕೋರಿ ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕರಿಗೆ ಮನವಿಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಹನುಮಂತನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ನಳಿನಾ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ವಿನಂತಿಸಿ ಮಂಡ್ಯದಲ್ಲಿರುವ ಚಂದ್ರಶೇಖರ್ ಎಂಬ ನಿಮ್ಮ ಚಿಕ್ಕಪ್ಪ ಅವರಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** **1 X 5 = 5**

**45.** ಗ್ರಂಥಾಲಯಗಳ ಮಹತ್ವ

**ಅಥವಾ**

ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ

***********

# ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

## ಕಲಾಸಿಪಾಳ್ಯ, ಬೆಂಗಳೂರು–02

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 100** ಮಾದರಿ ಪ್ರಶ್ನೆ ಪತ್ರಿಕೆ 7 **ಅವಧಿ : 3ಗಂ. 15ನಿಮಿಷಗಳು**

**I. ಪ್ರತಿಯೊಂದು ಹೇಳಿಕೆಯ ಕೆಳಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಬರೆಯಿರಿ.** **6 X1 = 6**

1. ಸಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಾದ ಪದವಿದು
   ಎ) ಶಸ್ತ್ರ ಬಿ) ಎಚ್ಚರ ಸಿ) ಅದ್ಭುತ ಡಿ) ಅಕ್ಷರ
2. ಸನ್ಮಾನ–ಪದವು ಈ ಸಂಧಿಗೆ ಉದಾಹರಣೆ :
   ಎ) ಅನುನಾಸಿಕಸಂಧಿ ಬಿ) ಆಗಮಸಂಧಿ ಸಿ) ಜಶ್ತ್ವಸಂಧಿ ಡಿ) ಸವರ್ಣದೀರ್ಘಸಂಧಿ
3. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು
   ಎ) ಸಾಮಾನ್ಯವಾಕ್ಯ ಬಿ) ಮಿಶ್ರವಾಕ್ಯ ಸಿ) ಪ್ರಶ್ನಾರ್ಥಕವಾಕ್ಯ ಡಿ) ಸಂಯೋಜಿತವಾಕ್ಯ
4. ಷಷ್ಠೀ ವಿಭಕ್ತಿಯ ಕಾರಕಾರ್ಥ
   ಎ) ಸಂಬಂಧ ಬಿ) ಅಧಿಕರಣ ಸಿ) ಸಂಪ್ರದಾನ ಡಿ) ಅಪಾದಾನ
5. 'ವ್ಯಾಪಾರಿ' ಪದವು ನಾಮಪದದ ಈ ಗುಂಪಿಗೆ ಸೇರಿದೆ.
   ಎ) ಭಾವನಾಮ ಬಿ) ರೂಢನಾಮ ಸಿ) ಅನ್ವರ್ಥನಾಮ ಡಿ) ಅಂಕಿತನಾಮ
6. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ
   ಎ) ಉದ್ಧರಣ ಚಿಹ್ನೆ ಬಿ) ಆವರಣ ಚಿಹ್ನೆ ಸಿ) ಭಾವಸೂಚಕ ಚಿಹ್ನೆ ಡಿ) ವಾಕ್ಯವೇಷ್ಟನ ಚಿಹ್ನೆ

**II. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4 X1 = 4**

7. ಕಟ್ಟಕಡೆಗೆ : ದ್ವಿರುಕ್ತಿ :: ಹುಳಹುಪ್ಪಡಿ ___________
8. ಸ್ಥಾನ : ತಾಣ :: ವಂಧ್ಯಾ :: ___________
9. ಆ ಕಲ್ಲು : ಗಮಕ ಸಮಾಸ :: ಕಣ್ದೆರೆ ___________
10. ಕುರ್ಚಿ : ಹಿಂದುಸ್ಥಾನಿ :: ಇಲಾಖೆ : ___________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 X1 = 7**

11. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆ ಯಾವುದು?
12. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?
13. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
14. ವಚನಕಾರರಿಗೆ ಯಾವುದು ದೇವರಾಗಿತ್ತು?
15. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?
16. ಹಲಗಲಿ ಗ್ರಾಮ ಎಲ್ಲಿದೆ?
17. ಆಲಿಯನ್ ವಾಲಾಭಾಗ್‌ನಲ್ಲಿ ಶಾಂತಿಯುತ ಸಭೆ ಯಾವಾಗ ನಡೆಯಿತು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10 x 2 = 20**

18. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?
19. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
20. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
21. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?
22. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?

23. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?

24. 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?

25. ಹಠಾತ್ತನೆ ಪ್ರಾಸ ಬಿಟ್ಟು ಕವನ ರಚಿಸಿದ ಸಂದರ್ಭವನ್ನು ಕವಿ ಗೋವಿಂದ ಪೈ ಅವರ ಮಾತಿನಲ್ಲಿ ಬರೆಯಿರಿ.

26. ರಾಜರ ಪ್ರಕೃತಿ ಹೇಗಿರುತ್ತದೆ ?

27. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : 2 x 3 = 6**

28. ವಿ.ಕೃ. ಗೋಕಾಕ್

29. ಜಿ. ಎಸ್. ಶಿವರುದ್ರಪ್ಪ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು।

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 x 3 = 3**

31. ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3**

32. ಕಟ್ಟುವುದು ಕಠಿಣ; ಕೆಡಹುವುದು ಸುಲಭ.

**ಅಥವಾ**

ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.

**IX. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ. 6 x 3 = 18**

33. "ಹುಲಿ ಈಗ ಎಷ್ಟು ಹಸಿದಿರಬೇಕು."

34. "ಪಂಡಿತಜನಮೆಲ್ಲಂ ಮೆಚ್ಚಿ ಬಿಚ್ಚಳಿಸಿ"

35. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"

36. "ನಿನ್ನುಪದೆಸೆಯ ಬಯಸುವನಲ್ಲ"

37. "ಮೇಣಾಯ್ತು ಕೌರವಂಗವನಿತಳಂ."

38. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"

**X. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4**

39. ಹಸುರಾಗಸ ______________

______________

______________

______________ಬಿಸಿಲು

**ಅಥವಾ**

ಹೊಸ ಹೂವಿನ ______________

______________

______________

______________ಯುಸಿರೂ!

**XI. ಕೆಳಗಿನ ಪದ್ಯಭಾಗದಲ್ಲಿ ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 x 4 = 4**

40. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।  
ನೊರ್ವನೇ ವೀರನಾತನ ಯಜ್ಞತುರಗಮಿದು ।  
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥  
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।  
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।  
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

41. ಭಾಷೆ ಸತ್ವಪೂರ್ಣವಾಗಿ ವಿಕಾಸಗೊಳ್ಳುವುದು ಯಾವಾಗ ?

**ಅಥವಾ**

ಕನ್ನಡಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆ ಹೇಗೆ ? ವಿವರಿಸಿ.

42. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ?

**ಅಥವಾ**

ದ್ರೋಣನೂ ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ?

**XIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 4 = (2+2)**

43. ಸಿ. ವಿ. ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣ ಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು. ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದೇನೆಂದರೆ ಬೆನ್ನು ತಟ್ಟಿ, ಅವನನ್ನು ಎಲ್ಲರ ಎದುರಿಗೆ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

**ಪ್ರಶ್ನೆಗಳು:**

ಅ) ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವನೆ ಏನಾಗಿತ್ತು?

ಆ) ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5= 5**

44. ನಿಮ್ಮನ್ನು ದೇವನಹಳ್ಳಿಯ ಸರ್ಕಾರಿ ಪ್ರೌಢಶಾಲೆಯ ಅದ್ವಿತ್ ಎಂದು ಭಾವಿಸಿಕೊಂಡು ಬೀದಿದೀಪ ಸರಿಪಡಿಸುವಂತೆ ಕೋರಿ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆಗೊಂದು ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ ಅಶ್ವತ್ ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ ಸದ್ಭಾವನಾ ದಿನವನ್ನು ವಿವರಿಸಿ ಬೆಂಗಳೂರಿನ ವಿವೇಕನಂದ ನಗರದ ನಿವಾಸಿಯಾದ ಕಸ್ತೂರಿ ಎಂಬ ಹೆಸರಿನ ತಾಯಿಯವರಿಗೊಂದು ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5**

45. ಸ್ವಚ್ಛಭಾರತ ಅಭಿಯಾನ

**ಅಥವಾ**

ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

***************

# ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

## ಕಲಾಸಿಪಾಳ್ಯ, ಬೆಂಗಳೂರು–02

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 100** ಮಾದರಿ ಪ್ರಶ್ನೆ ಪತ್ರಿಕೆ 8 **ಅವಧಿ : 3ಗಂ. 15ನಿಮಿಷಗಳು**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ , ಕ್ರಮಾಕ್ಷರದೊಂದಿಗೆ ಬರೆಯಿರಿ:** **6X1 =6**

1. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ
   ಎ) 34 ಬಿ) 09 ಸಿ) 05 ಡಿ) 13
2. ಆತ್ಮಾರ್ಥಕ ಸರ್ವನಾಮ ಪದಕ್ಕೆ ಉದಾಹರಣೆಯಾದ ಪದವಿದು.
   ಎ) ನೀನು ಬಿ) ನಾವು ಸಿ) ಇವರು ಡಿ) ತಾನು
3. ದ್ವಿತೀಯಾ ವಿಭಕ್ತಿಯ ಕಾರಕಾರ್ಥ
   ಎ) ಅಧಿಕರಣ ಬಿ) ಕರಣಾರ್ಥ ಸಿ) ಕರ್ಮಾರ್ಥ ಡಿ) ಸಂಬಂಧ
4. ' ಇಮ್ಮಾವು ' ಪದವು ಈ ಸಮಾಸಕ್ಕೆ ಸೇರಿದೆ.
   ಎ) ತತ್ಪುರುಷ ಬಿ) ಗಮಕ ಸಿ) ಕರ್ಮಧಾರೆಯ ಡಿ) ದ್ವಂದ್ವ
5. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು.
   ಎ) ಮಿಶ್ರವಾಕ್ಯ ಬಿ) ಸಾಮಾನ್ಯವಾಕ್ಯ ಸಿ) ಸ್ವತಂತ್ರವಾಕ್ಯ ಡಿ) ಸಂಯೋಜಿತ ವಾಕ್ಯ
6. ಪ್ರೀತಿಯ ಹಣತೆಯ <u>ಹಚ್ಚೋಣ</u>. ಈ ವಾಕ್ಯದಲ್ಲಿ ಗೆರೆ ಎಳೆದ ಪದವು ಈ ಕ್ರಿಯಾರೂಪಕ್ಕೆ ಸೇರಿದೆ.
   ಎ) ವಿಧ್ಯರ್ಥಕ ಬಿ) ನಿಷೇಧಾರ್ಥಕ ಸಿ) ಸಂಭಾವನಾರ್ಥಕ ಡಿ) ಪ್ರಶ್ನಾರ್ಥಕ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ: 4X1 =4**

7. ಸಕ್ಕಾರಿ : ಸಕ್ಕರೆ : : ಕಳುವ್ಯಾರೆ: ________
8. ದೃಷ್ಟಿ : ದಿಟ್ಟಿ : : ಪ್ರಸಾದ : ________
9. ಕೆನೆಮೊಸರು : ಜೋಡುನುಡಿ : : ಕಟ್ಟಕಡೆಗೆ : ________
10. ಕ್ಷೋಭೆ : ತಳಮಳ : : ಅರ್ತಿ : ________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:** **7X1 =7**

11. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು?
12. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?
13. ವಚನಕಾರರಿಗೆ ಯಾವುದು ದೇವರಾಗಿತ್ತು?
14. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
15. ಅಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ತಿಳಿಸಿ?
16. ಮುನಿಸುತರು ಹೆದರಲು ಕಾರಣವೇನು?
17. ಗುರೂಪದೇಶವು ಯಾರಿಗೆ ಮೆಚ್ಚಿಗೆಯಾಗುವುದಿಲ್ಲ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕಗಳಲ್ಲಿ ಉತ್ತರ ಬರೆಯಿರಿ:** **10X2 =20**

18. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?
19. ಅಶೋಕ ಪೈ ಅವರು ಹೇಳಿರುವ ಸಂಶೋಧನಾ ಸತ್ಯವೇನು? ತಿಳಿಸಿ.
20. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?
21. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
22. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?
23. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?
24. ' ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
25. ಬಾಲಕ ಭಗತ್‌ಸಿಂಗ್‌ನ ತಾಯಿಯ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯಲು ಕಾರಣವೇನು?

26. ‘ ಅನ್ ಟು ದಿಸ್ ಲಾಸ್ಟ್ ’ ಕೃತಿ ಗಾಂಧೀಜಿಯವರ ಮೇಲೆ ಯಾವ ರೀತಿಯ ಪರಿಣಾಮ ಬೀರಿತು?

27. ಪೈಗಳ ತಮ್ಮನ ನೂಲು ಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?

**V. ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿಗಳು, ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ: 2X3=6**

28. ಸಾ ರಾ ಅಬೂಬಕ್ಕರ್

29. ಜಿ. ಎಸ್. ಶಿವರುದ್ರಪ್ಪ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ: 1X3 =3**

30. ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ: 1X3 =3**

31. ಮಾತು ಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ: 1X3 =3**

32. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

**ಅಥವಾ**

ದೇಶ ಸುತ್ತಿ ನೋಡು: ಕೋಶ ಓದಿ ನೋಡು

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ವಿಸ್ತರಿಸಿ ಬರೆಯಿರಿ: 6X3 =18**

33. “ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ”

34. “ಸೂರ್ಯನೇ ತೇಜಗೆಡೆ ತೇಜಕೆಡೆಯಾರು?”

35. “ಪಂಡಿತಜನಮೆಲ್ಲಂ ಮೆಚ್ಚಿ ಬಿಚ್ಚಳಿಸಿ”

36. “ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್”

37. “ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ”

38. “ದ್ರೋಣನೆಂಬನೇಂ ಪಾರ್ವನೆ”

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ: 1X4 =4**

39. ನೀಲಮೇಘಮಂಡಲ ______ **ಅಥವಾ** ಯುಗ – ಯುಗಗಳ ______

______ ______

______ ______

______ ______

ಹಕ್ಕಿ ಹಾರುತಿದೆ ನೋಡಿದಿರಾ? ಹಕ್ಕಿ ಹಾರಿತಿದೆ ನೋಡಿದೊರಾ?

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ: 1X4 =4**

40. ನೆಲಕಿರಿವೆನೆಂದು ಬಗೆದಿರೆ
ಚಲಕಿರಿವೆಂ ಪಾಂಡುಸುತರೊಳೀನೆಲನಿದು ಪಾ
ಳ್ನೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ: 2X4 =8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ‘ ಮಾದರಿ ಮೈಸೂರು ರಾಜ್ಯ ’ ಹೇಗಾಯಿತು?

**ಅಥವಾ**

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

42. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?

**ಅಥವಾ**

ಕರ್ಣನ ನಿರ್ಧಾರ ಸರಿ ಎನ್ನುವಿರಾ? ಏಕೆ?

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ: 2+2 =4**

43. ದೇಶದ ಪ್ರಗತಿ, ಜನರ ಉದ್ಧಾರ ಅಸಿ, ಮಸಿ, ಮತ್ತು ಕೃಷಿಯನ್ನು ಅವಲಂಬಿಸಿದೆ. ಅಸಿ ಎಂದರೆ ಯುದ್ಧ. ಯುದ್ಧ ಎಂದರೆ ಸೈನಿಕರು. ಸೈನಿಕ ಬಲ ಇದ್ದಾಗ ದೇಶದ ಸಂರಕ್ಷಣೆ ಸಾಧ್ಯ. ಹಾಗೆಯೇ ರಕ್ಷಣೆಗಿಂತ ಮುಖ್ಯವಾದುದು ಮಸಿ. ಮಸಿ ಎಂದರೆ ಶಿಕ್ಷಣ. ‘ಪೆನ್ನು ಖಡ್ಗಕ್ಕಿಂತ ಹರಿತ’ ಎನ್ನುವ ಗಾದೆ ಇದೆ.

ಅಸಿ, ಮಸಿಗಿಂತ ಮಹತ್ವದ್ದು ಕೃಷಿ. ಕೃಷಿಕ ನಮ್ಮ ನಾಡಿನ ಬೆನ್ನೆಲುಬು. ಒಕ್ಕಲಿಗ ಒಕ್ಕಿದರೆ ಜಗವೆಲ್ಲ ಬಿಕ್ಕುವುದು ಎನ್ನುವ ಮಾತಿದೆ. ಆಹಾರವಿಲ್ಲದೆ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಬದುಕಲು ಸಾಧ್ಯವೇ? ನಾವು ಯಾವ ಕಾರ್ಖಾನೆಯಿಂದಲೂ ಟೊಮೆಟೋ ತಯಾರಿಸಲು, ಅಕ್ಕಿ ಪಡೆಯಲು, ರಾಗಿ ಬೆಳೆಯಲು ಸಾಧ್ಯವಿಲ್ಲ. ಇದಕ್ಕೆಲ್ಲ ಭೂಮಿಯೇ ಬೇಕು. ರೈತನು ಬೆವರು ಭೂಮಿಗೆ ಸುರಿಯಬೇಕು. ಹಾಗಾಗಿ ಸರ್ವಜ್ಞ 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೆ ಕೆಡಗುಂ' ಎಂದಿರುವುದು ಗಮನಾರ್ಹ.

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಅಂದರೆ ವ್ಯವಸಾಯವೇ ಮೇಲು. ಈ ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು. ಆದರೆ ಇಂದು ಕೃಷಿಕರ ಗತಿ ಏನಾಗಿದೆ? ಅವನು ಒಂದೆಡೆ ನಿಸರ್ಗದ ಜೊತೆ ಸೆಣಸಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಬೀಜ ಸಿಗುವುದಿಲ್ಲ. ಭೂಮಿ ಬರಡಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ತಗುಲಿ ಬೇಸಾಯವೇ ಬೇಡ ಎನ್ನುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಮತ್ತೊಂದೆಡೆ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ವ್ಯವಸ್ಥೆಯ ವಿರುದ್ಧವೂ ಕೃಷಿಕ ಹೋರಾಟ ನಡೆಸಬೇಕಾಗಿದೆ. ಆದರೂ ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ. ಹಾಸಿಗೆ ಇದ್ದಷ್ಟು ಕಾಲು ಚಾಚುತ್ತಿದ್ದಾರೆ.

**ಪ್ರಶ್ನೆಗಳು:**

ಎ) ಇಂದು ಕೃಷಿಕರು ಎದುರುಸುತ್ತಿರುವ ಸಮಸ್ಯೆಗಳಾವುವು?

ಬಿ) ಸರ್ವಜ್ಞ 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯಯೇ ಮೇಲು' ಎನ್ನಲು ಕಾರಣವೇನು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ: 1X5 =5**

44. ನೀವು ಮೈಸೂರಿನ ಅಶೋಕನಗರ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ' ಪ್ರಬುದ್ಧ' ಎಂದು ಭಾವಿಸಿಕೊಂಡು, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ 'ಕನ್ನಡ ನಿಘಂಟು'ವಿನ ಹತ್ತು ಪ್ರತಿಗಳನ್ನು ಕಳುಹಿಸಿಕೊಡುವಂತೆ ಕೋರಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ರಾಯಚೂರಿನ ಸಿದ್ದಾರ್ಥ ಪ್ರೌಢಶಾಲೆಯ ' ಶಾರದ' ಎಂದು ಭಾವಿಸಿಕೊಂಡು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಆಗಮಿಸುವಂತೆ ಕೋರಿ ಬಳ್ಳಾರಿಯ ನಿವಾಸಿಯಾದ ರೇಣುಕಾ ಎಂಬ ಹೆಸರಿನ ತಾಯಿಯವರಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ: 1X5=5**

45. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

**ಅಥವಾ**

ಶಾಲಾ ಸ್ವಚ್ಛತೆಯಲ್ಲಿ ವಿದ್ಯಾರ್ಥಿಗಳ ಪಾತ್ರ.

*****************

## ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

## ಕಲಾಸಿಪಾಳ್ಯ, ಬೆಂಗಳೂರು–02

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 100** ಮಾದರಿ ಪ್ರಶ್ನೆ ಪತ್ರಿಕೆ 9 **ಅವಧಿ : 3ಗಂ. 15ನಿಮಿಷಗಳು**

**I. ಕೆಳಗಿನ ಪ್ರಶ್ನೆಗಳಿಗೆ / ಹೇಳಿಕೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆಯ್ದು, ಕ್ರಮಾಕ್ಷರದೊಂದಿಗೆ ಬರೆಯಿರಿ.** **6*1 = 6**

**1. 'ಕಡೆಗಣ್ಣು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ**

ಎ) ಗಮಕ ಸಮಾಸ ಬಿ) ಕ್ರಿಯಾ ಸಮಾಸ ಸಿ) ಅಂಶಿ ಸಮಾಸ ಡಿ) ತತ್ಪುರುಷ ಸಮಾಸ

**2. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ**

ಎ) ವಿವರಣಾತ್ಮಕ ಚಿಹ್ನೆ ಬಿ) ಆವರಣ ಚಿಹ್ನೆ ಸಿ) ವಾಕ್ಯವೇಷ್ಠನ ಚಿಹ್ನೆ ಡಿ) ಉದ್ಧರಣ ಚಿಹ್ನೆ

**3. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳು**

ಎ) 02 ಬಿ) 07 ಸಿ) 09 ಡಿ) 05

4. **ಪಂಚಮಿ ವಿಭಕ್ತಿಯ ಕಾರಕಾರ್ಥ**

ಎ) ಕರಣಾರ್ಥ ಬಿ) ಸಂಪ್ರದಾನ ಸಿ) ಅಧಿಕರಣ ಡಿ) ಅಪಾದಾನ

5. **'ತಿನ್ನುವಿಕೆ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.**

ಎ)ತದ್ಧಿತಾಂತ ಭಾವನಾಮ ಬಿ) ಕೃದಂತ ನಾಮ ಸಿ) ಕೃದಂತ ಭಾವನಾಮ ಡಿ) ಕೃದಂತ ಅವ್ಯಯ

6. **ಕ್ರಿಯಾತ್ಮಕ ಅವ್ಯಯಕ್ಕೆ ಉದಾಹರಣೆಯಾದ ಪದವಿದು**

ಎ) ಅದುವೇ ಬಿ) ಉಂಟು ಸಿ) ಚಟ ಚಟ ಡಿ) ಸುಮ್ಮನೆ

**II. ಕೆಳಗಿನವುಗಳಲ್ಲಿ ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.**

7. ಪರ್ವತ : ರೂಢನಾಮ : : ವಿಜ್ಞಾನಿ : ----------- **4*1 =4**

8. ಸಂದೇಯ : ಸಂದೇಹ : : ಬಂಜೆ : -----------

9. ನಟ್ಟ ನಡುವೆ : ದ್ವಿರುಕ್ತಿ : : ಕೆನೆ ಮೊಸರು : -----------------

10. ಕೈವಾರ : ಹೊಗಳಿಕೆ : : ಅನ್ವಯ : ----------------------

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7*1 = 7**

11. ಕನ್ನಡಕ್ಕೆ ಪರ್ಷಿಯನ್ ಪದಗಳು ಯಾವಾಗ ಬಂದವು?

12. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?

13. ರಾಹಿಲನು ತುರ್ತುಪರಿಸ್ಥಿತಿಯ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?

14. 'ವೆಸ್ಟ್ ಮಿನ್ ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?

15. ಹಕ್ಕಿಯ ಚುಂಚಗಳು ಎಲ್ಲಿಯವರೆಗೂ ಚಾಚಿವೆ?

16. ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?

17. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರೇನು?

**IV. ಕೆಳಕಂಡ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10*2=20**

18. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

19. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನಸ್ಸಿನಲ್ಲಿ ಮೂಡಿದ ಪ್ರಶ್ನೆಗಳಾವುವು?

20. ಲಕ್ಷ್ಮಣನು ತನ್ನ ಅಣ್ಣನನ್ನು ಹೇಗೆ ಸಂತೈಸಿದನು?

21. ಆತಿಥ್ಯ ಸ್ವೀಕರಿಸಿದ ರಾಮ ಲಕ್ಷ್ಮಣರು ಶಬರಿಗೆ ಏನೆಂದು ಹೇಳಿದರು?

22. ಕುಂತಿ ಮಾದ್ರಿಯರು ಯಾರ ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?

23. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?

24. 'ವಸಂತ ಮುಖ ತೋರಲಿಲ್ಲ' ಪದ್ಯದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

25. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ?.

26. ಜ್ಞಾನಿ ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವೇನು?

27. ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿರಿ

**V. ಕೆಳಕಂಡ ಕವಿಗಳ /ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿ ಮತ್ತು ಬಿರುದು ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. 3*2=6**

28. ವಿ. ಕೃ. ಗೋಕಾಕ್ 29. ಪಂಪ

**VI. ಕೆಳಕಂಡ ಪದ್ಯ ಭಾಗಕ್ಕೆ ಲಘು ಗುರು ಪ್ರಸ್ತಾರ ಹಾಕಿ ಗಣ ವಿಂಗಡಿಸಿ ಛಂದಸ್ಸಿನ ಹೆಸರು ಬರೆಯಿರಿ. 1*3=3**

30. ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗಳ್

**VII. ಕೆಳಕಂಡ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. 1*3=3**

31. ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ

**VIII. ಕೆಳಕಂಡ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1*3=3**

32. ಚಿಂತೆಯೇ ಮುಪ್ಪು; ಸಂತೋಷವೇ ಯೌವ್ವನ

**ಅಥವಾ**

ಕುಳಿತು ಉಂಡವನಿಗೆ ಕುಡಿಕೆ ಹೊನ್ನು ಸಾಲದು

**IX. ಕೆಳಕಂಡ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಸ್ವಾರಸ್ಯವನ್ನು ಬರೆಯಿರಿ. 6*3=18**

33. "ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ"

34. " ಕೈಗಾರಿಕೀಕರಣ ಇಲ್ಲವೇ ಅವನತಿ"

35. "ನಿನಗೊಂದು ಗುಡಿ ಮನೆ ಕಟ್ತಾ ಇದ್ದೀವಿ ತಾಯಿ"

36. "ಮಂಗಳ ಲೋಕದ ಅಂಗಳಕೇರಿ"

37. " ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ"

38. " ಹಸುರ್ಗಟ್ಟಿತೊ ಕವಿಯಾತ್ಮಂ"

**X. ಕೆಳಕಂಡ ಪದ್ಯವನ್ನು ಪೂರ್ಣಗೊಳಿಸಿ ಬರೆಯಿರಿ. 1*4=4**

39. ಉರ್ವಿಯೊಳ್-----------------

-------------------------------

-------------------------------

---------------- ಲವನುರಿದೆದ್ದನು

**ಅಥವಾ**

ತೆಗೆದುತ್ತರೀಯಮಂ-----------------

---------------------------------

---------------------------------

------------------------ ಜಾನಕಿಯ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು ಅದರಲ್ಲಿ ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ. 1*4=4**

40. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡ ಗೋಡೆಗಳ

ಕೆಡವುತ ಸೇತುವೆಯಾಗೋಣ

**XII. ಕೆಳಕಂಡ ಪ್ರಶ್ನೆಗಳಿಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **2*4=8**

41. ಸಪ್ತ ವ್ಯಸನಿಗಳಾಗಿದ್ದ ಅಗ್ನಿಭೂತಿ ವಾಯುಭೂತಿಯರು ಪಂಡಿತರಾದುದು ಹೇಗೆ?

ಅಥವಾ

ಸೂರ್ಯ ಮಿತ್ರನು ತಮ್ಮ ಮಾವನೆಂದು ತಿಳಿದಾಗ ಅಗ್ನಿಭೂತಿ ವಾಯುಭೂತಿಯರಲ್ಲಿ ಮೂಡಿದ ಭಾವನೆಗಳೇನು? ವಿವರಿಸಿ.

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

ಅಥವಾ

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ.** **2 * 2 = 4**

43. ಭಾರತೀಯ ಕ್ರಿಕೆಟಿನ ಯಶಸ್ಸಿನ ಹಿಂದೆ ನೂರಾರು ಖ್ಯಾತನಾಮರಿದ್ದಾರೆ. ಅವರಲ್ಲಿ ಕರ್ನಾಟಕದ ರಾಹುಲ್ ದ್ರಾವಿಡ್ ಸಹ ಒಬ್ಬರು. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ಮಾತು ರಾಹುಲ್ ದ್ರಾವಿಡ್ ಅವರಿಗೆ ಸೊಗಸಾಗಿ ಅನ್ವಯವಾಗುತ್ತದೆ. ಅವರು ಬಾಲ್ಯದಲ್ಲಿಯೇ ಕ್ರಿಕೆಟ್ ಆಟದಲ್ಲಿ ಆಸಕ್ತಿ ಹೊಂದಿ ಸತತ ಅಭ್ಯಾಸ ಮಾಡುತ್ತಿದ್ದರು. ಅದರ ಫಲವಾಗಿ ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ಶಾಲಾ ತಂಡವನ್ನು ಪ್ರತಿನಿಧಿಸುವಂತಾಯಿತು. ಆಡಿದ ಮೊದಲ ಪಂದ್ಯದಲ್ಲಿಯೇ ಶತಕವನ್ನು ಭಾರಿಸಿದರು. ಒಂದು ಉತ್ತಮವಾದ ಎಸೆತವು ಪ್ರಸಿದ್ಧ ಆಟಗಾರನನ್ನಾದರೂ ಔಟ್ ಮಾಡಬಹುದು ಆದರೆ ರಾಹುಲ್ ದ್ರಾವಿಡ್ ಅವರದು ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನು ನಿಭಾಯಿಸುವ, ವಿಕೇಟನ್ನು ಒಪ್ಪಿಸದಿರುವ, ಸಾವಕಾಶವಾಗಿ ರನ್ ಗಳಿಸುವ ಅದ್ವಿತೀಯ ಬ್ಯಾಟಿಂಗ್ ಶೈಲಿ. ದಿನವಿಡೀ ಕ್ರೀಸ್ ನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಅವರದ್ದು. ಅದೇ ಅವರನ್ನು 'ಗೋಡೆ' ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರನ್ನಾಗಿರಿಸಿತ್ತು. 'ಬೌಂಡರಿ ಬಾರಿಸು ಅಥವಾ ಔಟಾಗು' ಎಂಬ ಮನೋಭಾವದ ಆಟಗಾರರಿಗಿಂತ ಭಿನ್ನವಾದ ಶೈಲಿ ರಾಹುಲ್ ಅವರದ್ದು. ಸಂಯಮದ ಹೊಡೆತ, ಉತ್ತಮ ಎಸೆತವನ್ನು ಗೌರವಿಸುವುದು, ಕೆಟ್ಟ ಎಸೆತವನ್ನು ಅಷ್ಟೇ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವುದು, ಎಲ್ಲ ಬಗೆಯ ಹೊಡೆತಗಳಲ್ಲೂ ಶಿಸ್ತು, ಕಲಾತ್ಮಕತೆ ಎಲ್ಲವೂ ನಯನ ಮನೋಹರ. ಇವು ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯವಾಗಿತ್ತು. ರಾಹುಲ್ ದ್ರಾವಿಡ್ ಅವರು ಎಂದೂ ಸ್ವಂತ ದಾಖಲೆಗಾಗಿ ಆಡಿದವರಲ್ಲ. ತಂಡದ ಗೆಲುವಿಗಾಗಿ ದೇಶದ ಗೌರವಕ್ಕಾಗಿ ಆಡಿದವರು.

**ಪ್ರಶ್ನೆಗಳು:**

ಅ) ರಾಹುಲ್ ದ್ರಾವಿಡ್ ಅವರನ್ನು ಗೋಡೆ ಎಂದು ಕರೆಯಲು ಕಾರಣವೇನು ?

ಆ) ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯಗಳೇನು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1*5=5**

44. ನಿಮ್ಮನ್ನು ಬೆಂಗಳೂರಿನ ಚಂದಾಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ರಚಿತ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಭಾಷಾ ಪ್ರಯೋಗಾಲಯ ಪ್ರಾರಂಭಿಸಲು ಅಗತ್ಯ ನೆರವು ನೀಡುವಂತೆ ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರಿಗೆ ಮನವಿ ಪತ್ರವನ್ನು ಬರೆಯಿರಿ.

*ಅಥವಾ*

ನಿಮ್ಮನ್ನು ಬಿಜಾಪುರದ ಬಾಲಕರ ಪ್ರೌಢಶಾಲೆಯ ವಿದ್ಯಾರ್ಥಿ 'ರಾಹುಲ್' ಎಂದು ಭಾವಿಸಿಕೊಂಡು ಬಳ್ಳಾರಿ ಜಿಲ್ಲೆಯ ಹಳೇಬಾವಿ ನಿವಾಸಿಯಾದ ಸಹೋದರ 'ಈಶ್ವರಯ್ಯ ಉಳ್ಳಾಗಡ್ಡಿ' ಎಂಬುವವರನ್ನು ನಿಮ್ಮ ಶಾಲೆಯಲ್ಲಿ ನಡೆಯುವ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.

**XV. ಕೆಳಕಂಡ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಮೀರದಂತೆ ಬರೆಯಿರಿ.** **1*5=5**

45. ಸಸ್ಯ ಶ್ಯಾಮಲದ ಮಹತ್ವ

ಅಥವಾ

ಅತಿವೃಷ್ಟಿಯಿಂದಾದ ಅನಾಹುತಗಳು

*******************

## ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

## ಕಲಾಸಿಪಾಳ್ಯ, ಬೆಂಗಳೂರು–02

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 100** ಮಾದರಿ ಪ್ರಶ್ನೆ ಪತ್ರಿಕೆ 10 **ಅವಧಿ : 3ಗಂ. 15ನಿಮಿಷಗಳು**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ,** ಕ್ರಮಾಕ್ಷರದೊಂದಿಗೆ ಬರೆಯಿರಿ. **6X1=6**

**1. 'ಬೆಂಬತ್ತು' ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

ಎ) ಲೋಪ ಸಂಧಿ ಬಿ) ಆಗಮ ಸಂಧಿ ಸಿ) ಆದೇಶ ಸಂಧಿ ಡಿ) ಜಶ್ತ್ವ ಸಂಧಿ

**2. ಕ್ರಿಯಾ ಸಮಾಸಕ್ಕೆ ಉದಾಹರಣೆಯಾದ ಪದವಿದು.**

ಎ) ಇನತನೂಜ ಬಿ) ಕೈಯಾನು ಸಿ) ಅರಮನೆ ಡಿ) ನಡುರಾತ್ರಿ

**3. ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯ**

ಎ) ಸಾಮಾನ್ಯಾವ್ಯಯ ಬಿ) ನಿಷೇಧಾರ್ಥಕಾವ್ಯಯ ಸಿ) ಅನುಕರಣಾವ್ಯಯ ಡಿ) ಕ್ರಿಯಾರ್ಥಕಾವ್ಯಯ

**4. ಸರ್ವನಾಮ ಪದಕ್ಕೆ ಉದಾಹರಣೆಯಿದು**

ಎ) ದೇಶ ಬಿ) ಅವರು ಸಿ) ನದಿ ಡಿ) ಶಿಕ್ಷಕ

**5. ನೋಡು ಪದದ ಸಂಭಾವನಾರ್ಥಕ ರೂಪವಿದು.**

ಎ) ನೋಡಿಯಾರು ಬಿ) ನೋಡಲಿ ಸಿ) ನೋಡೋಣ ಡಿ) ನೋಡರು

**6. ಅಪಾದಾನ ಕಾರಕಾರ್ಥ ಹೊಂದಿರುವ ವಿಭಕ್ತಿ**

ಎ) ಪ್ರಥಮಾ ಬಿ) ಪಂಚಮೀ ಸಿ) ಸಪ್ತಮೀ ಡಿ) ದ್ವಿತೀಯಾ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.**

7. ಯುದ್ಧ : ಜುದ್ಧ : : ತಪಸ್ವಿ : --------- **4X1=4**

8. ಅನಾನಸು : ಪೋರ್ಚುಗೀಸ್ : : ಮುಸಾಫರ್ : --------

9. ಆಗುಹೋಗು : ಜೋಡುನುಡಿ : : ತಮ್ಮ ತಮ್ಮ : ---------------

10. ಚಂದ್ರನಂತೆ : ತದ್ಧಿತಾಂತಾವ್ಯಯ : : ಬರೆಯುತ್ತ : ----------

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7X1=7**

11. ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು?

12. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?

13. ಶಬರಿಯು ಯಾರ ಆಶ್ರಮದಲ್ಲಿ ವಾಸವಾಗಿದ್ದಳು?

14. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳಿಸಿದಳು?

15. ಕುವೆಂಪುರವರು ನೋಡಿದ ಅಡಕೆಯ ತೋಟ ಎಲ್ಲಿದೆ?

16. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು?

17. ಪುಟ್ಟಿಯ ಅಮ್ಮ ಎಲ್ಲಿ ಮಲಗಿದ್ದಾಳೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10X2=20**

18. ಲಿಪಿಯ ಜಾಡು ಆರಂಭಗೊಂಡ ಬಗೆ ಹೇಗೆ?

19. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?

20. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

21. ಲಂಡನ್ನಿನ ಟೊಪ್ಪಿಗೆಯ ವಿಶೇಷತೆಯ ಕುರಿತು ವಿ.ಕೃ. ಗೋಕಾಕರು ಏನು ಹೇಳಿದ್ದಾರೆ

22. ಲಾವಣಿಗಳನ್ನು ವೀರಗೀತೆಗಳೆಂದು ಏಕೆ ಕರೆಯಲಾಗಿದೆ?

23. ಹಲಗಲಿಗೆ ದಂಡು ಬರಲು ಕಾರಣವೇನು?

24. ಭಗತ್ ಸಿಂಗ್ ಜಲಿಯನ್ ವಾಲಾಬಾಗ್ ಮಾರಣಹೋಮದಿಂದ ತೆಗೆದುಕೊಂಡ ನಿರ್ಧಾರವೇನು?

25. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?

26. ಹಾಡು ಕಿವಿಗೆ ಬಿದ್ದಾಗ ಪೈಗಳು ಏನು ಮಾಡಿದರು?

27. ಗುರೂಪದೇಶವು ಯಾರಿಗೆ ಮೆಚ್ಚಿಗೆಯಾಗುವುದಿಲ್ಲ?

**V. ಕೆಳಗಿನ ಕವಿಗಳ /ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು /ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2X3=6**

28. ವಿ.ಕೃ. ಗೋಕಾಕ        29. ಕುವೆಂಪು

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. 1X3=3**

30. ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರುಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ. 1X3=3**

31. ಮರನನೇರಿದ ಮರ್ಕಟನಂತೆ

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1X3=3**

32. ಹಾಸಿಗೆಯಿದ್ದಷ್ಟು ಕಾಲು ಚಾಚು

**ಅಥವಾ**

ಶಕ್ತಿಗಿಂತ ಯುಕ್ತಿ ಮೇಲು

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6X3=18**

33. "ಹಾಗಾದರೆ ನಿಮಗೆಲ್ಲಾ ಮನೆ ಉಂಟಾ ನನ್ನ ಮಕ್ಕಳಾ?"

34. "ಯುದ್ಧಕ್ಕೆ ಹೋಗಿದ್ದಾನೆ!"

35. "ಕಣ್ಣನೀರಂ ತೀವಿ ನೆಲನಂ ಬರೆಯುತ್ತಿರೆ"

36. "ಮನ್ವಂತರಗಳ ಭಾಗ್ಯವ ತೆರೆಸಿ"

37. "ಎನಗೆನಿಮ್ಮಡಿಗಳಲಿ ಸಮಸೇವನೆಯೆ ದೇವ "

38. "ನೊಳವಿಂಗೆ ಕುಪ್ಪೆ ವರಂ "

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1X4=4**

39. ನೆಲಕಿಚಿವೆನೆಂದು----------        ಪುಟ್ಟಿದ--------------

---------------------------        ಅಥವಾ        -----------------------------

--------------------        --------------------

-----------------ಪುದುವಾಟ್ಟಿಪೆನೆ        ------------------------ಮೆಚಿವೆಂ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1X4=4**

40. ಮತಗಳೆಲ್ಲವೂ ಪಥಗಳು

ಎನ್ನುವ ಹೊಸ ಎಚ್ಚರದೊಳು ಬದುಕೋಣ

ಭಯ ಸಂಶಯದೊಳು ಕಂದಿದ ಕಣ್ಣೊಳು

ನಾಳಿನ ಕನಸನು ಬಿತ್ತೋಣ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2X4=8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

**ಅಥವಾ**

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

**ಅಥವಾ**

ವೀರಲವ ಪದ್ಯದಲ್ಲಿ ಲವನ ವೀರತನ ಹೇಗೆ ವ್ಯಕ್ತಗೊಂಡಿದೆ ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X4 =4 (2+2)**

43. ಭಗವಂತನಲ್ಲಿಡುವ ದೃಢಶ್ರದ್ಧೆಯು, ಆತ್ಮಶ್ರದ್ಧೆಗೂ, ಸತ್ಕರ್ಮದಿಂದಲೇ ಶ್ರೇಯಸ್ಸು, ಯಶಸ್ಸು, ವಿಜಯ ಎನ್ನುವ ಶ್ರದ್ಧೆಗೂ ಕಾರಣವಾಗುವುದು. ಶ್ರದ್ಧೆಯ ಮಹಿಮೆಯನ್ನು ಆಧ್ಯಾತ್ಮವಾದಿಯೂ ಕೊಂಡಾಡುತ್ತಾನೆ. ವಿಜ್ಞಾನಿಯೂ ಕೊಂಡಾಡುತ್ತಾನೆ. ಶ್ರದ್ಧೆಯೇ ಜೀವನ. ಶ್ರದ್ಧೆಯಿಂದಲೇ ಜೀವನ ಸಾರ್ಥಕ್ಯ. ಶ್ರದ್ಧೆಯೇ ಜೀವನದ ತಳಹದಿ, ಶ್ರದ್ಧೆಯೇ ಆಧ್ಯಾತ್ಮಿಕ ಸೌಧದ ಅಡಿಪಾಯ, ಶ್ರದ್ಧೆಯೇ ಆತನ ಕೃಪೆ ಪಡೆಯಲು ಇರುವ ದಿವ್ಯ ಸಾಧನ, ಶ್ರದ್ಧೆಯಿಂದ ಎಲ್ಲವೂ ಸಾಧ್ಯ. ಶ್ರದ್ಧೆಯಿದ್ದಲ್ಲಿ ಆತನಿದ್ದಾನೆ. ಆತನ ದರ್ಶನ ಪಡೆಯಲು ಶ್ರದ್ಧೆ ಬೇಕು. ಇಂತಹ ಅಮೂಲ್ಯವಾದ ಶ್ರದ್ಧೆ ಎಲ್ಲರ ಪಾಲಿಗೆ ಒಂದೇ ದಿನದಲ್ಲಿ ದೊರಕುವುದೇ? ಅದಕ್ಕಾಗಿ ನಿದ್ದೆ ತೊರೆದು, ಎದ್ದುಬಿದ್ದು, ಆತನನ್ನು ಸ್ಮರಿಸುತ್ತ, ವಿದ್ಯೆ , ವಿನಯಗಳನ್ನುಳಿಸಿಕೊಂಡು, ಆ ದಾರಿಯಲ್ಲಿ ಸಾಗಿದಾಗ ಶ್ರದ್ಧೆ ಮೈಗೂಡುವುದು. ಈಜಲು ಕಲಿಯಲು ನೀರಿಗಿಳಿಯಲೇ ಬೇಕು. ಹಾಗೆಯೇ ಶ್ರದ್ಧೆ ಮೈಗೂಡಲು ಪ್ರಯತ್ನವೆಂಬ ಸಮುದ್ರಕ್ಕಿಳಿಯಲೇ ಬೇಕು. ಮೊದಲು ಈಜು ಕಲಿಯುವಾತ ಅಂಜುತ್ತಾನೆ ಅಥವಾ ಒಂದೆರಡು ಬಾರಿ ವಿಫಲನಾಗುತ್ತಾನೆ. ಹಾಗೆಂದು ಅವನು ಈಜುವ ಪ್ರಯತ್ನವನ್ನು ಬಿಟ್ಟುಬಿಟ್ಟರೆ ಹೇಗೆ? ಹಾಗೆಯೇ ಆಧ್ಯಾತ್ಮಿಕ ರಾಜ್ಯದಲ್ಲಿ ಪ್ರಯತ್ನ ಅತ್ಯಾವಶ್ಯಕ. ಎಷ್ಟು ಬಾರಿ ವಿಫಲರಾದರೂ ಮತ್ತೂ ಬಿಡದೇ ಪ್ರಯತ್ನ ಮುಂದುವರಿಸಬೇಕು. ಈಜು ಕಲಿಯುವ ಯತ್ನದಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾದವ ಕೊಳದಲ್ಲಿ ಈಜಬಲ್ಲ. ಆದರೆ ಅವನು ಸಮುದ್ರದಲ್ಲಿ ಈಜುವ ಸಾಹಸ ಮಾಡಲಾರ. ಈ ದಿಸೆಯಲ್ಲಿ ಅವನಿಗೆ ಇನ್ನೂ ಹೆಚ್ಚಿನ ತರಬೇತಿ ಬೇಕು. ಹಾಗೆಯೇ ಅಲ್ಪ ಶ್ರದ್ಧಾನ್ವಿತರಿಂದ ಅಲ್ಪಸ್ವಲ್ಪ ಕಾರ್ಯ ಸಾಧ್ಯ. ಆದರೆ ಮಹತ್ಕಾರ್ಯ ಆಗದು. ಅದಕ್ಕೆ ಪೂರ್ಣ ಶ್ರದ್ಧೆ ಮೈಗೂಡಿಸಿಕೊಂಡವರೇ ಬೇಕು.ಈ ನಿಟ್ಟಿನಲ್ಲಿ ನಾವು ಗುರಿ ಸೇರುವವರೆಗೂ ವಿಶ್ರಮಿಸದೆ ಮುನ್ನಡೆಯುವ ಛಲ ಬೆಳೆಸಿಕೊಳ್ಳಬೇಕು.

ಪ್ರಶ್ನೆಗಳು :

ಅ. ಶ್ರದ್ಧೆಯ ಮಹತ್ವ ವಿವರಿಸಿ.

ಆ. ಶ್ರದ್ಧೆಯನ್ನು ರೂಢಿಸಿಕೊಳ್ಳುವುದು ಹೇಗೆ ಸಾಧ್ಯ ?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1X5=5**

**44.** ನಿಮ್ಮನ್ನು ಹಾವೇರಿಯ ಬ್ಯಾಡಗಿ ತಾಲೂಕಿನ ಕನಕ ವಿದ್ಯಾ ಪೀಠ ಪ್ರೌಢಶಾಲೆಯಲ್ಲಿ ಓದುತ್ತಿರುವ **ಪ್ರಣೀತ್** ಎಂದು ಭಾವಿಸಿ ನಿಮ್ಮ ಶಾಲೆಯಲ್ಲಿ ಆಚರಿಸಿದ ಗಾಂಧಿಜಯಂತಿ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ **ವಿಶ್ವಶಾಂತಿ ದಿನ**ಪತ್ರಿಕೆಯ ಸಂಪಾದಕರಿಗೆ **ಮನವಿ** ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ **ಪ್ರತೀಕ್ಷಾ** ಎಂದು ಭಾವಿಸಿ ನಿಮ್ಮ ಶಾಲೆಯ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ಆಹ್ವಾನಿಸಿ ದಾವಣಗೆರೆಯಲ್ಲಿರುವ ನಿಮ್ಮ ಸಹೋದರಿ ಪೂಜಾಳಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1X5=5**

45. ಸ್ವಚ್ಛ ಭಾರತ ಅಭಿಯಾನ

ಅಥವಾ

ಜನಸಂಖ್ಯಾ ಸ್ಫೋಟಕ್ಕೆ ಕಾರಣಗಳು ಮತ್ತು ಪರಿಹಾರಗಳು

****************